ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಕನ್ನಡ ಅಭ್ಯಾಸ ಪುಸ್ತಕ

## ಭಾಗ–2

## (ಪರಿಷ್ಕೃತ)

# 7

## ಏಳನೆಯ ತರಗತಿ

©KTBS
NOT TO BE REPUBLISHED

**2026–27**

ಹೆಸರು : ..............................................................................

ಶಾಲೆಯ ಹೆಸರು : ..............................................................................

..............................................................................

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 560 085.

# ಆಶಯ ನುಡಿ

"ಶ್ರೇಷ್ಠ ಶಿಕ್ಷಣ ಕೇವಲ ಮಾಹಿತಿಯನ್ನು ಒದಗಿಸುವುದಿಲ್ಲ, ಬದಲಿಗೆ ಅಸ್ತಿತ್ವದಲ್ಲಿರುವ ಎಲ್ಲಾದರೊಂದಿಗೆ ಸಾಮರಸ್ಯದಿಂದಿರುವುದನ್ನು ಕಲಿಸುತ್ತದೆ".

**– ರವೀಂದ್ರನಾಥ್ ಠಾಗೋರ್**

ಪ್ರತಿ ರಾಷ್ಟ್ರದ ಅಭಿವೃದ್ಧಿಯು ಅಲ್ಲಿನ ಶಿಕ್ಷಣದ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಕಲಿಕೆಯಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಲು ವಿದ್ಯಾರ್ಥಿಗಳಲ್ಲಿ ಕಲಿಕಾ ಅನುಭವಗಳಿಂದ ಉಂಟಾದ ಕಲಿಕಾ ಫಲವನ್ನು ನಿರೀಕ್ಷಿಸಲಾಗುತ್ತದೆ. ಇದಕ್ಕಾಗಿ ಶಾಲಾ ಶಿಕ್ಷಣ ಇಲಾಖೆ ನಿರಂತರವಾಗಿ ಹಲವಾರು ಉಪಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನ ಮಾಡುತ್ತಿದೆ.

2021ನೇ ಸಾಲಿನಲ್ಲಿ DSERT ಕಛೇರಿ ವತಿಯಿಂದ ಸಿದ್ದಪಡಿಸಿರುವ 4 ರಿಂದ 9ನೇ ತರಗತಿಯ ಕನ್ನಡ ಭಾಷೆ, ಆಂಗ್ಲ ಭಾಷೆ ಹಾಗೂ ಗಣಿತ ವಿಷಯಗಳ ಅಭ್ಯಾಸ ಪುಸ್ತಕ ಭಾಗ–1 ಮತ್ತು ಭಾಗ–2 ನ್ನು ಪರಿಶೀಲಿಸಿ, ಪರಿಷ್ಕರಿಸಿ ಹಾಗೂ ಹೊಸ ಪಠ್ಯ ಪುಸ್ತಕಗಳಿಗನುಗುಣವಾಗಿ ರಚಿಸಿ, ವಿದ್ಯಾವಿಕಾಸ ಯೋಜನೆಯಡಿ 2026–27ನೇ ಸಾಲಿಗೆ ಅನ್ವಯವಾಗುವಂತೆ ಸಿದ್ಧಪಡಿಸಿದೆ. ಮಕ್ಕಳ ಸಾಮರ್ಥ್ಯಾಧಾರಿತ ಕಲಿಕೆಗೆ ಅಗತ್ಯವಿರುವ ಕಲಿಕಾ ಫಲಗಳನ್ನು ಸಾಧಿಸಲು ಮತ್ತು ಕಲಿಕೆಯನ್ನು ದೃಢಗೊಳಿಸಲು ಅನುಕೂಲವಾಗುವಂತೆ ಹಾಗೂ ವಿದ್ಯಾರ್ಥಿಗಳ ವೈಯಕ್ತಿಕ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು 'ಅಭ್ಯಾಸ ಪುಸ್ತಕ' ಗಳನ್ನು ರೂಪಿಸಲಾಗಿದೆ.

ಕಲಿಕಾಫಲ ಆಧಾರಿತ ಕಲಿಕೆಯನ್ನು ದೃಢೀಕರಿಸಿಕೊಳ್ಳಲು ಪಠ್ಯಪುಸ್ತಕಕ್ಕೆ ಪೂರಕವಾಗಿ ಹೆಚ್ಚಿನ ಅಭ್ಯಾಸಗಳನ್ನು ಒಳಗೊಂಡಿರುವ ಈ ಅಭ್ಯಾಸ ಪುಸ್ತಕಗಳನ್ನು ಸಂಪನ್ಮೂಲ ಶಿಕ್ಷಕರಿಂದ ರಚಿಸಿ, ಪರಿಶೀಲಿಸಿ, ಪರಿಷ್ಕರಣೆ ಮಾಡಿದ್ದು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಇದನ್ನು ಸಮರ್ಥವಾಗಿ ಬಳಸಿಕೊಳ್ಳುವುದು. ಮಕ್ಕಳ ಕಲಿಕಾ ಸಾಧನೆಯ ಮಟ್ಟವನ್ನು ಹೆಚ್ಚಿಸಲು ಎಲ್ಲರೂ ನಿರಂತರವಾಗಿ ಪ್ರಯತ್ನಿಸೋಣವೆಂದು ಆಶಿಸುತ್ತೇನೆ.

ಅಭ್ಯಾಸ ಪುಸ್ತಕಗಳ ರಚನೆ, ಪರಿಶೀಲನೆ ಮತ್ತು ಪರಿಷ್ಕರಣೆಯಲ್ಲಿ ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದನೆಗಳು.

**ಶ್ರೀ. ವಿಕಾಸ್ ಕಿಶೋರ್ ಸುರಳ್ಕರ್., ಭಾ.ಆ.ಸೇ.,**
ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು.

NOT TO BE REPUBLISHED @KTBS

# ಶುಭ ಹಾರೈಕೆ

**"ಶಿಕ್ಷಣಕ್ಕೆ ದತ್ತ ಅವಕಾಶ ನೀಡಿ, ಅದನ್ನು ನೆರವೇರಿಸುವ ಕರ್ತವ್ಯ ನಮ್ಮದು"**

**–ಮಹಾತ್ಮಾ ಗಾಂಧೀಜಿ**

ಮಹಾತ್ಮಾ ಗಾಂಧೀಜಿಯವರ ಆಶಯದಂತೆ ಮೇಲಿನ ಹೇಳಿಕೆಯು ಇಂದಿಗೂ ಪ್ರಸ್ತುತವಾಗಿದ್ದು, ಪ್ರಸಕ್ತ ಶತಮಾನದ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿ. ಅಗತ್ಯವಿರುವ ಜ್ಞಾನ, ಜೀವನ ಕೌಶಲಗಳನ್ನು ಪೂರೈಸಲು ಶಿಕ್ಷಣ ವ್ಯವಸ್ಥೆಯು ವಿಕಸನಗೊಳ್ಳುತ್ತಿದೆ. ಬೋಧನೆ ಮತ್ತು ಕಲಿಕೆಯ ಪರಿಕಲ್ಪನೆಯು ವ್ಯಾಪಕವಾದ ಬದಲಾವಣೆಗಳಿಗೆ ಒಳಗಾಗಿದೆ. ಇದರನ್ವಯ ಇಲಾಖೆಯು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ, ಗುಣಮಟ್ಟದ ಶಿಕ್ಷಣವನ್ನು ನೀಡಲು ನಿರಂತರವಾಗಿ ಕ್ರಮ ವಹಿಸುತ್ತಿದೆ.

ಮಕ್ಕಳ ಸಾಮರ್ಥ್ಯಾಧಾರಿತ ಕಲಿಕೆಗೆ ಅಗತ್ಯವಿರುವ ಕಲಿಕಾಫಲಗಳನ್ನು ಸಾಧಿಸಲು ಮತ್ತು ಕಲಿಕೆಯನ್ನು ದೃಢಗೊಳಿಸಲು ಅನುಕೂಲವಾಗುವಂತೆ ಕನ್ನಡ, ಇಂಗ್ಲಿಷ್ ಮತ್ತು ಗಣಿತ ವಿಷಯಗಳಿಗೆ ವಿದ್ಯಾರ್ಥಿಗಳ ಕಲಿಕಾ ಅಂತರವನ್ನು ಗಮನದಲ್ಲಿಟ್ಟುಕೊಂಡು 'ಅಭ್ಯಾಸ ಪುಸ್ತಕ' ಗಳನ್ನು ರೂಪಿಸಲಾಗಿದೆ.

ಪ್ರತಿ ಪಠ್ಯ ಪುಸ್ತಕಕ್ಕೆ ಅಭ್ಯಾಸ ಪುಸ್ತಕವನ್ನು ಎರಡು ಭಾಗಗಳಲ್ಲಿ ರಚಿಸಲಾಗಿದ್ದು, ಭಾಗ – 1 ಮತ್ತು ಭಾಗ – 2 ಅಭ್ಯಾಸ ಪುಸ್ತಕಗಳನ್ನು ಪ್ರತಿ ವಿದ್ಯಾರ್ಥಿಗೆ ನೀಡಲಾಗಿದೆ. ಘಟಕದ ಅಂತ್ಯದಲ್ಲಿ ಕಿರು ಪರೀಕ್ಷೆಯನ್ನು (Micro test) ನೀಡಿದ್ದು, ಸ್ವಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳಿಗೆ ಸ್ವಮೌಲ್ಯಮಾಪನ ಸಾಧನವನ್ನು ನೀಡಿದೆ.

ಈ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳು ಎಲ್ಲಾ ಹಂತದ ಮಕ್ಕಳು ಅತ್ಯವಶ್ಯಕವಾದ ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳಲು ಸಹಾಯಕವಾಗುತ್ತವೆ. ಮಕ್ಕಳು ಸ್ವತಂತ್ರವಾಗಿ ಹಾಗೂ ಕೆಲವು ಕಡೆ ಅಧ್ಯಾಪಕರ, ಸಹಪಾಠಿಗಳ ಅಥವಾ ಪೋಷಕರ ನೆರವಿನಿಂದ ಈ ಚಟುವಟಿಕೆಗಳನ್ನು ತರಗತಿಗಳಲ್ಲಿ, ತರಗತಿಯ ನಂತರ ಅಥವಾ ಮನೆಯಲ್ಲಿ ಮಾಡಬಹುದಾಗಿದೆ. ಎಲ್ಲಾ ವಿಷಯಗಳಿಗೂ ಆಕರ್ಷಕ ಚಿತ್ರ, ಓದು, ಬರಹದ ಮೂಲಕ ಮಕ್ಕಳು ಅದನ್ನು ಅರ್ಥೈಸಿಕೊಳ್ಳುವಂತೆ ಸರಳವಾಗಿ ರೂಪಿಸಲಾಗಿದೆ. ಸಮೀಕ್ಷೆ ಆಧಾರಿತ ಸಾಧನ ಪರೀಕ್ಷೆಗಳಾದ NAS, CSAS ಮತ್ತು ARAKH Rashtriya Sarvekshan 2024ರ ಸಮೀಕ್ಷಾ ವರದಿಗಳನ್ನು ವಿಶ್ಲೇಷಿಸಿದ್ದು, ಇದರಲ್ಲಿ ಮಕ್ಕಳ ಸಾಧನೆಯನ್ನು ಉತ್ತಮಪಡಿಸಲು ಸೂಕ್ತ ಚಟುವಟಿಕೆಗಳನ್ನು ಸೇರ್ಪಡೆ ಮಾಡಿದೆ.

ಇಲ್ಲಿ ನೀಡಿರುವ ಚಟುವಟಿಕೆಗಳೇ ಅಂತಿಮವಲ್ಲ, ಕಲಿಕೆಗೆ ಸಂಬಂಧಿಸಿದಂತೆ ಇತರೇ ಲಭ್ಯ ಚಟುವಟಿಕೆಗಳನ್ನು ಆಧರಿಸಿ ಕಲಿಯಲು ಮುಕ್ತ ಅವಕಾಶ ನೀಡಬೇಕು. ಮಗು ಮಾಡಿದ ಚಟುವಟಿಕೆಗಳನ್ನು ಗಮನಿಸಿ ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗಿದೆ. ಈ 'ಅಭ್ಯಾಸ ಪುಸ್ತಕ'ಗಳು ಪಠ್ಯಪುಸ್ತಕಗಳಿಗೆ ಪೂರಕ ಸಂಪನ್ಮೂಲವಾಗಿದ್ದು, ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಸಹಾಯಕವಾಗಲಿದೆ. 'ಅಭ್ಯಾಸ ಪುಸ್ತಕ' ಬಳಕೆಗೆ ಪ್ರೇರಕ ಶಕ್ತಿಯಾಗಿರುವ ಶಿಕ್ಷಕ ವೃಂದವು ಉತ್ತಮ ಶಿಕ್ಷಣವನ್ನು ಎಲ್ಲಾ ವಿದ್ಯಾರ್ಥಿಗಳಿಗೆ ತಲುಪಿಸುವ ಗುರುತರ ಜವಾಬ್ದಾರಿಯನ್ನು ಹೊಂದಿರುತ್ತದೆ.

ವಿದ್ಯಾರ್ಥಿಗಳಲ್ಲಿ ಹುದುಗಿರುವ ಜ್ಞಾನ, ಕೌಶಲ್ಯಗಳನ್ನು ಹೊರತರಲು ಈ 'ಅಭ್ಯಾಸ ಪುಸ್ತಕ'ಗಳು ಸದುಪಯೋಗವಾಗಲೆಂದು ಆಶಿಸುತ್ತೇನೆ. ಈ ಪುಸ್ತಕಗಳನ್ನು ಸಿದ್ಧಪಡಿಸಲು ಹಾಗೂ ಪರಿಶೀಲನೆ ಮತ್ತು ಪರಿಷ್ಕರಿಸಲು ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದನೆಗಳನ್ನು ಸಲಿಸುತ್ತಾ ಎಲ್ಲರಿಗೂ ಶುಭಹಾರೈಸುತ್ತೇನೆ.

**ಶ್ರೀ ಗೋಪಾಲಕೃಷ್ಣ H N,**

**ನಿರ್ದೇಶಕರು,**

**DSERT, ಬೆಂಗಳೂರು**

© KTBS NOT TO BE REPUBLISHED

# ಅಭ್ಯಾಸ ಪುಸ್ತಕ 2026–27

## ಪರಿಕಲ್ಪನೆ ಮತ್ತು ಮಾರ್ಗದರ್ಶನ

| | |
|---|---|
| **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್.,**<br>ಭಾ.ಆ.ಸೇ.,<br>ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ,<br>ನೃಪತುಂಗ ರಸ್ತೆ, ಬೆಂಗಳೂರು. | **ಶ್ರೀ ಗೋಪಾಲಕೃಷ್ಣ H N,**<br>ನಿರ್ದೇಶಕರು,<br>DSERT, ಬೆಂಗಳೂರು |

## ಸಹಕಾರ

| | | |
|---|---|---|
| ಶ್ರೀಮತಿ ಮಂಗಳ ಜಿ<br>ಉಪ ನಿರ್ದೇಶಕರು,<br>DSERT, ಬೆಂಗಳೂರು | ಯೋಗೇಶ ಕೆ,<br>ಪ್ರಾಂಶುಪಾಲರು<br>ಡಯಟ್, ಮಂಡ್ಯ | ನಿರ್ಮಲ ವಿ<br>ಉಪನ್ಯಾಸಕರು<br>ಡಯಟ್, ಮಂಡ್ಯ |

## ನಿರ್ವಹಣೆ

| |
|---|
| **ಶ್ರೀಮತಿ ರಾಧಾ ಪಿ.**<br>ಹಿರಿಯ ಸಹಾಯಕ ನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ, ಬೆಂಗಳೂರು |

## ತಾಂತ್ರಿಕ ಸಹಕಾರ

| |
|---|
| **ಶ್ರೀ ಮೋಹನ್ ಕುಮಾರ್ ಪಿ**<br>ತಾಂತ್ರಿಕ ಸಹಾಯಕರು<br>ಡಿ.ಎಸ್.ಇ.ಆರ್.ಟಿ, ಬೆಂಗಳೂರು |

## ಪರಿಶೀಲನೆ/ ಪರಿಷ್ಕರಣೆ ತಂಡ

| | |
|---|---|
| **ಮಹೇಶ ಬಿ.ಎಂ.,**<br>**ಸ.ಶಿ., ಸ.ಹಿ.ಪ್ರಾ.ಶಾಲೆ, ಹೊನಗನಹಳ್ಳಿ,**<br>**ಮಳವಳ್ಳಿ ತಾ ಮಂಡ್ಯ** | **ಶಿಲ್ಪಾ ಎನ್,**<br>**ಪ.ಪ್ರಾ.ಶಾ.ಶಿ, ಸ.ಹಿ.ಪ್ರಾ.ಶಾಲೆ, ತೊರೆಶೆಟ್ಟ ಹಳ್ಳಿ,**<br>**ಮದ್ದೂರು ತಾ ಮಂಡ್ಯ** |

@KTBS NOT TO BE REPUBLISHED

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1. | ನಾನೆಷ್ಟು ಕಲಿತಿರುವೆ | 1 – 3 |
| 2. | ಪ್ರಾಸಪದಗಳು | 4 – 6 |
| 3. | ದ್ವಿರುಕ್ತಿಗಳು | 7 – 9 |
| 4. | ಜೋಡು ನುಡಿಗಳು | 10 – 13 |
| 5. | ದೇಶೀಯ – ಅನ್ಯದೇಶೀಯ ಪದಗಳು | 14 – 16 |
| 6. | ಲೇಖನ ಚಿಹ್ನೆಗಳು | 17 – 19 |
| 7. | ವಿಭಕ್ತಿ ಪ್ರತ್ಯಯಗಳು | 20 – 26 |
| 8. | ಕಿರುಪರೀಕ್ಷೆ – 1 | 27 – 28 |

| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 9. | ವಚನಗಳು | 29 – 31 |
| 10. | ತತ್ಸಮ–ತದ್ಭವ | 32 – 34 |
| 11. | ಸಮಾಸಗಳು | 35 – 39 |
| 12. | ವಾಕ್ಯಗಳು | 40 – 42 |
| 13. | ಕಿರುಪರೀಕ್ಷೆ – 2 | 43 – 44 |
| 14. | ಸಂಭಾಷಣೆ | 45 – 48 |
| 15. | ಪ್ರಬಂಧ ರಚನೆ | 49 – 51 |
| 16. | ಪತ್ರಲೇಖನ | 52 – 53 |
| 17. | ಛಂದಸ್ಸು | 54 – 56 |
| 18. | ಕಿರು ಪರೀಕ್ಷೆ – 3 | 57 – 58 |
| | ಹೆಚ್ಚಿನ ಜ್ಞಾನಕ್ಕಾಗಿ | 59 |


@KTBS NOT TO BE REPUBLISHED

**ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶಗಳು :**

* ಈ ಅಭ್ಯಾಸ ಪುಸ್ತಕದ ಪ್ರತಿ ಪುಟವನ್ನು ದಿನಕ್ಕೊಂದರಂತೆ ಅಭ್ಯಾಸ ಮಾಡಬೇಕು.
* ಅಭ್ಯಾಸ ಪುಸ್ತಕದಲ್ಲಿ ಒಂದು ಪುಟ ಪೂರ್ಣಗೊಳಿಸಿದ ನಂತರವೇ ಮುಂದಿನ ಪುಟಕ್ಕೆ ಹೋಗಬೇಕು.
* ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಮಾದರಿಯಂತೆಯೇ ಚಟುವಟಿಕೆಗಳನ್ನು ಮಾಡಿ, ಅರ್ಥೈಸಿಕೊಂಡು ಕಲಿಯಬೇಕು.
* ಚಟುವಟಿಕೆಗಳು ಅರ್ಥವಾಗದಿದ್ದಲ್ಲಿ ಸ್ನೇಹಿತರ/ಶಿಕ್ಷಕರ ಸಹಾಯ ಪಡೆಯುವುದು.
* ಸ್ವಯಂ ಮೌಲ್ಯ ಮಾಪನ ಪುಟದಲ್ಲಿ ನಿಮಗೆ ಪೂರ್ಣಗೊಳಿಸಲು ಸಾಧ್ಯವಾದ ಚಟುವಟಿಕೆಗಳಿಗೆ '☺' ಸಂಕೇತವನ್ನು, ಭಾಗಶಃ ಸಾಧ್ಯವಾಗದಿದ್ದಲ್ಲಿ '😐' ಸಂಕೇತವನ್ನು ಅಥವಾ ಇಷ್ಟವಾಗದೇ ಇದ್ದಲ್ಲಿ '☹' ಸಂಕೇತವನ್ನು ಗುರುತಿಸಬೇಕು.
* ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಕಿರು ಪರೀಕ್ಷೆ ಬರೆದು ನಿಮ್ಮ ಪ್ರಗತಿಯ ಮಟ್ಟವನ್ನು ನೀವೇ ಪರೀಕ್ಷಿಸಿಕೊಳ್ಳಲು ಕ್ರಮ ಅನುಸರಿಸುವುದು.

# 1. ನಾನೆಷ್ಟು ಕಲಿತಿರುವೆ?

**ಅ. ಸಜಾತಿ ಮತ್ತು ವಿಜಾತಿ ಒತ್ತಕ್ಷರ ಪದಗಳನ್ನು ಗುರುತಿಸಿ ಬರೆಯಿರಿ.**

ಲಕ್ಷ್ಮಿ, ಈರುಳ್ಳಿ, ವಿಶ್ವಾಸ, ಹೆಬ್ಬಾವು, ಚೈತ್ರ, ದೊಡ್ಡಪ್ಪ, ಹೆಜ್ಜೇನು, ಕೊಬ್ಬರಿ, ಪ್ರತಿಜ್ಞೆ, ನೃತ್ಯ.

1. ಸಜಾತಿ = ____________________

2.ವಿಜಾತಿ = ____________________

**ಆ. ಸಮಾನಾರ್ಥಕ ಪದಗಳನ್ನು ಬರೆಯಿರಿ.**

1. ಇರುಳು = ________ , ________ , ________
2. ಕಣ್ಣು = ________ , ________ , ________
3. ಕಾಡು = ________ , ________ , ________

**ಇ. ಸೂಕ್ತ ಪದ ಆರಿಸಿ ಬಿಟ್ಟ ಸ್ಥಳಗಳನ್ನು ತುಂಬಿರಿ.**

1. ಆಕಾಶದಲ್ಲಿ ________ ಹಾರುತ್ತಿದೆ ( ಅಕ್ಕಿ. ಹಕ್ಕಿ )
2. ಹಸುವು ________ ಕೊಡುತ್ತದೆ ( ಹಾಲು. ಆಲು )

**ಈ. ನಾನಾರ್ಥಕ ಪದಗಳನ್ನು ಬರೆಯಿರಿ.**

1. ಗಜ = ________ , ________ , ________
2. ಕಣ್ಣು = ________ , ________ , ________
3. ಕಾಡು = ________ , ________ , ________

**ಉ. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

1. ಲಾಭ × ________ 2. ಹಿಗ್ಗು × ________ 3. ಸತ್ಯ × ________

4. ಭಾರ × ________ 5. ಹಿಂದೆ × ________ 6. ಏರು × ________

**ಊ. ವಾಕ್ಯ ಮಾಡಿ.**

1. ಅಜಗಜಾಂತರ = ____________________

____________________

© KTBS NOT TO BE REPUBLISHED

2. ಅಟ್ಟಕ್ಕೇರಿಸು = ______________________

______________________

**ಋ. ಗಾದೆ ಪೂರ್ಣಗೊಳಿಸಿ.**

1. ಕುಂಬಾರನಿಗೆ ವರುಷ, ______________
2. ಮಿಂಚಿಹೋದ ಕಾರ್ಯಕ್ಕೆ ______________
3. ಅಡಿಕೆಗೆ ಹೋದ ಮಾನ ______________

**ಎ. ನಿಮಗೆ ತಿಳಿದಿರುವ ಯಾವುದಾದರೂ ಮೂರು ಒಗಟುಗಳನ್ನು ಬರೆಯಿರಿ.**

1. ______________________

______________________

2. ______________________

______________________

3. ______________________

______________________

**ಏ. ರೂಢನಾಮ, ಅನ್ವರ್ಥನಾಮ, ಅಂಕಿತನಾಮಗಳಾಗಿ ವಿಂಗಡಿಸಿ.**

ದೇಶ, ವಕೀಲ, ಚೈತ್ರ, ಹಳ್ಳಿ, ಶಿಕ್ಷಕಿ, ಇಬ್ರಾಹಿಂ

**ಐ. ಕೊಟ್ಟಿರುವ ಪದಗಳ ಮೊದಲ ಅಕ್ಷರದ ಸಹಾಯದಿಂದ ಅಕಾರಾದಿಯಾಗಿ ಬರೆಯಿರಿ.**

ಭಾನು, ಅಕ್ಕರೆ, ಐರಾವತ, ಓಲಗ, ಅಂಜೂರ, ಋಣ, ಢಣಢಣ, ಆಮೆ, ಒಲವು, ಔತಣ, ಕಬ್ಬಿಣ, ಇರುವೆ, ಖಡ್ಗ, ಗಜಾನನ, ತಂದೆ, ಘಂಟೆ, ಚಮಚ, ಟಗರು, ಡಮರುಗ, ಥಳಥಳ, ಉಮಾ, ದನ, ಈಚಲ, ಜಡೆ, ಊಟ, ಛತ್ರಿ, ಎಲೆ, ಝರಿ, ಏಲಕ್ಕಿ, ಠಕ್ಕ, ಧನ, ಯಶೋಧ, ಲವಣ, ರವಿ ಷಣ್ಮುಖ, ಸರಸ, ಶಂಖ, ಹಣವಂತ.

______________________

______________________

______________________

@KTBS NOT TO BE REPUBLISHED

**ಒ. ಓದಿ ನಂತರ ಇವುಗಳನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ ಬರೆಯಿರಿ.**

1. ಲಕ್ಷ್ಮಿಯು ಉತ್ಸಾಹದಿಂದ ಉತ್ಸವವನ್ನು ನೋಡಲು ಹೊರಟಳು.
2. ವಿಶ್ವಾಸನು ರೈಲ್ವೆ ನಿಲ್ದಾಣದತನಕ ಸ್ಕೂಟರಿನಲ್ಲಿ ಹೋದನು.
3. ಶಾಲಾ ವಾರ್ಷಿಕೋತ್ಸವದಲ್ಲಿ ನೃತ್ಯ, ಹಾಡು, ಹಾಸ್ಯ ಎಲ್ಲವೂ ಇದ್ದವು.
4. ಊರಿನಿಂದ ರಮ್ಯ, ಪದ್ಮ, ಲಕ್ಷ್ಮಿ, ರತ್ನ ಮತ್ತು ಸ್ನೇಹ ಬಂದರು.
5. ವಿಜ್ಞಾನದಿಂದ ನಮ್ಮ ಅಜ್ಞಾನವನ್ನು ತೊಡೆದು ಹಾಕಬಹುದು.
6. ರಮೇಶನು ಪಾಠವನ್ನು ಸ್ಪಷ್ಟವಾಗಿ ಓದಿದನು.

ಈ ಚಟುವಟಿಕೆಯಿಂದ ನೀನೇನು ಕಲಿತೆ? ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ.

@KTBS NOT TO BE REPUBLISHED

# 2. ಪ್ರಾಸ ಪದಗಳು

**ಅ. ಗೆರೆ ಎಳೆದ ಪದಗಳನ್ನು ಮಾದರಿಯಂತೆ ಬರೆಯಿರಿ.**

ಜನ್ಮಭೂಮಿಗೆ ವಚನ ಕೊಟ್ಟು
ಹೋರಾಡುವ ಪಣವ ತೊಟ್ಟು
ದೇಶಕ್ಕಾಗಿ ಪ್ರಾಣ ಬಿಟ್ಟ ವೀರರೇ
ನಿಮ್ಮ ಜೀವವನ್ನೇ ಬಲಿಕೊಟ್ಟ ಶೂರರೇ
ವಂದನೆ ವಂದನೆ ವಂದನೆ – ಭಾರತಾಂಬೆ ಯೋಧರಿಗೆ ವಂದನೆ

ಮಡದಿ ಮಕ್ಕಳ ಮನೆಯಲ್ಲಿಟ್ಟು
ತಂದೆ ತಾಯ ಮನದಲ್ಲಿಟ್ಟು
ಬಂಧು ಬಳಗ ಮರೆತುಬಿಟ್ಟು
ನಮ್ಮ ನಾಡಿಗಾಗಿ ದುಡಿಯುವ ಯೋಧರೆ,
ವಂದನೆ ವಂದನೆ ವಂದನೆ – ಭಾರತಾಂಬೆ ಯೋಧರಿಗೆ ವಂದನೆ

ಬಿಸಿಲು ಮಳೆಗೆ ಜಗ್ಗದ
ಚಳಿಗಾಳಿಗೆ ಕುಗ್ಗದ
ಬೆದರಿಕೆಗೆ ಬಗ್ಗದ ಧೀರರೇ
ಸ್ಥೈರ್ಯದಿಂದ ಮುನ್ನುಗ್ಗುವ ವೀರರೇ
ನಮ್ಮ ದೇಶವನ್ನು ಕಾಯುವ ತರುಣರೇ
ವಂದನೆ ವಂದನೆ ವಂದನೆ – ಭಾರತಾಂಬೆ ಯೋಧರಿಗೆ ವಂದನೆ

@KTBS NOT TO BE REPUBLISHED

**ಮಾದರಿ: ಕೊಟ್ಟು – ತೊಟ್ಟು**

| | |
|---|---|
| | |
| | |

**ಆ. ನಿಮಗೆ ತಿಳಿದಿರುವ ಯಾವುದಾದರೂ ನಾಲ್ಕು ಪ್ರಾಸ ಪದಗಳನ್ನು ಬರೆಯಿರಿ.**

| | |
|---|---|
| | |
| | |

ನಿಮ್ಮ ಜ್ಞಾನಕ್ಕಾಗಿ: ಇವುಗಳನ್ನು 'ಪ್ರಾಸ ಪದಗಳು' ಎನ್ನುತ್ತೇವೆ.

## ಇ. ಪ್ರಾಸ ಪದಗಳನ್ನು ಜೋಡಿಸಿ ಬರೆಯಿರಿ.

| | | | | | |
|---|---|---|---|---|---|
| ದೀಪ | ಮರಳು | ಉಳಿಸು | ಭೀತಿ | ಹಾಡು | ಮನವ |
| ಹಚ್ಚು | ರೂಪ | ಕರುಳು | ಪಡೆ | ಮನೆ | ಇಡಿ |
| ಗೂಡು | ಆಡು | ಮರೆತೇವು | ನಾಡು | ಗಡಿನಾಡು | ಸಿಡಿ |
| ಪ್ರೀತಿ | ನೀತಿ | ಮನ | ಕುಡಿ | ಇರುಳು | ಸೊಂಪು |
| ನಡುನಾಡು | ಅಚ್ಚು | ತೊಡೆ | ಮುಡಿ | ಹಿಡಿ | ಮರೆವ |
| ಮಿಡಿ | ತೊರೆದೇವು | ಜನ | ಗಳಿಸು | ಕಂಪು | ತೆನೆ |

@KTBS
NOT TO BE REPUBLISHED

**ಮಾದರಿ :**

| | |
|---|---|
| **ಕರುಳು – ಇರುಳು** | |
| | |
| | |
| | |
| | |
| | |
| | |

**ಈ. ಕೆಳಗಿನ ಚಿತ್ರ ಮತ್ತು ಪದ ನೋಡಿ ಕವನ ರಚಿಸಿ. (ಪ್ರಾಸ ಪದ ಬರುವಂತೆ)**



ಮಳೆ, ಪಟಪಟ

ಇಳೆ, ಕೊಳ್ಳ

ಬೆಳೆ, ಆಟ

ಹೊಳೆ, ಚಟಪಟ

ತೊರೆ, ಕೆರೆ

ಹಳ್ಳ , ಓಟ

@KTBS
NOT TO BE REPUBLISHED

**ಉ. ನೀವು ರಚಿಸಿದ ಕವನದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.**

# 3. ದ್ವಿರುಕ್ತಿಗಳು

## ಅ. ಓದಿ ಆನಂದಿಸಿ. ನಂತರ ಬರೆಯಿರಿ.

| | | |
|---|---|---|
| ನಡೆ ನಡೆ | ಬೇಗ ಬೇಗ | ಸಾಲು ಸಾಲು |
| ನೋಡಿ ನೋಡಿ | ಕೇಳಿ ಕೇಳಿ | ಹೇಳಿ ಹೇಳಿ |
| ರಾಶಿ ರಾಶಿ | ಬೇಡ ಬೇಡ | ತಿಂದು ತಿಂದು |
| ಬರಲಿ ಬರಲಿ | ಇರಲಿ ಇರಲಿ | ಬೇಡಿ ಬೇಡಿ |
| ನಿಲ್ಲು ನಿಲ್ಲು | ಬನ್ನಿ ಬನ್ನಿ | ಚಿಕ್ಕ ಚಿಕ್ಕ |
| ಹತ್ತಿರ ಹತ್ತಿರ | ಪುನಃ ಪುನಃ | ಈಗೀಗ |
| ಆಹಾಹಾ | ಊರೂರು | ಒಳಗೊಳಗೆ |
| ಒಂದೊಂದು | ಎರಡೆರಡು | ಅಡಿಗಡಿಗೆ |
| ಕೊನೆಕೊನೆಗೆ | ಅಲ್ಲಲ್ಲಿ | ಅಬ್ಬಬ್ಬಾ |

ಎಲ್ಲವನ್ನು ಎರಡೆರಡು ಬಾರಿ ಉಚ್ಚರಿಸಿದಿರಲ್ಲವೇ? ಇವೇನೆಂದು ತಿಳಿಯಿರಿ.

©KTBS NOT TO BE REPUBLISHED

## ಆ. ಗೆರೆ ಎಳೆದ ಪದಗಳನ್ನು ಮಾತ್ರ ಗಮನಿಸುತ್ತಾ ಬರೆಯಿರಿ.

1. ಶಾಂತಾಳು ಮಧ್ಯೆ ಮಧ್ಯೆ ಮಾತನಾಡುತ್ತಿದ್ದಳು.
2. ದರ್ಶನನು ತಿನ್ನು ತಿನ್ನು ಎಂದು ನನ್ನನ್ನು ಒತ್ತಾಯಿಸುತ್ತಿದ್ದನು.
3. ಸಭೆಯ ತುಂಬಾ ಪುಟ್ಟ ಪುಟ್ಟ ಮಕ್ಕಳೇ ಇದ್ದರು.
4. ಅಪ್ಪಾ ಅಪ್ಪಾ, ನಾನು ಆಟದಲ್ಲಿ ಗೆದ್ದು ಬಂದೆ.
5. ಚನ್ನಪಟ್ಟಣದ ಬಣ್ಣ ಬಣ್ಣದ ಗೊಂಬೆಗಳು ನೋಡಲು ಚೆನ್ನ.
6. ವೇಣುವಿನ ಮನೆಯಲ್ಲಿ ಬಿಸಿ ಬಿಸಿ ಗಸಗಸೆ ಪಾಯಸ ಸಿದ್ಧವಿತ್ತು.
7. ಅಮ್ಮಾ ಅಮ್ಮಾ ನನಗೆ ಹಸಿವಾಗುತ್ತಿದೆ.
8. ಸುಮಾ ಆಟವಾಡಲು ಚಿಕ್ಕ ಚಿಕ್ಕ ಕಲ್ಲುಗಳನ್ನು ಹೆಕ್ಕುತ್ತಿದ್ದಳು.
9. ಅತಿಥಿಗಳು ಬಂದಾಗ ಅವರನ್ನು ಬನ್ನಿ ಬನ್ನಿ ಎಂದು ಕರೆಯುತ್ತೇವೆ.
10. ವರುಣನ ಬಳಿ ಲಕ್ಷ ಲಕ್ಷ ಹಣವಿದೆ.
11. ಒಮ್ಮೊಮ್ಮೆ ನನಗೆ ಕಾಲು ನೋವು ಬರುತ್ತದೆ.
12. ಅಲ್ಲಲ್ಲಿ ಕಸವನ್ನು ಹಾಕಬಾರದು.
13. ಚೈತ್ರಳ ನೃತ್ಯವನ್ನು ನೋಡಿ ನೋಡಿ ಸಂತೋಷಪಟ್ಟೆ.
14. ಕತ್ತಲಾಗುತ್ತಿದ್ದುದರಿಂದ ಬೇಗ ಬೇಗ ಮನೆ ಸೇರಿದೆ.
15. ಅಬ್ಬಬ್ಬಾ! ಜೋಗದ ಜಲಪಾತ ಎಷ್ಟು ಸುಂದರವಾಗಿದೆ.

ನಿಮಗಾಗಿ : ಎಲ್ಲಾ ಪದಗಳನ್ನು ಎರಡೆರಡು ಸಲ ಹೇಳಿದಿರಲ್ಲವೇ? ಇವನ್ನು 'ದ್ವಿರುಕ್ತಿ'ಗಳು ಎನ್ನುತ್ತೇವೆ.

@KTBS NOT TO BE REPUBLISHED

**ಇ. ನಿತ್ಯ ಬಳಸುವ ಇತರ ದ್ವಿರುಕ್ತಿಗಳನ್ನು ಪಟ್ಟಿಮಾಡಿ.**

______________________ ______________________

______________________ ______________________

______________________ ______________________

______________________ ______________________

______________________ ______________________

______________________ ______________________

**ಈ. ದ್ವಿರುಕ್ತಿಗಳನ್ನು ಮಾತ್ರ ಆರಿಸಿ ಬರೆಯಿರಿ.**

ನಡೆ ನುಡಿ, ಚಿಕ್ಕ ಚಿಕ್ಕ, ಮನೆ ಮಠ, ಹಣ ಕಾಸು, ಸಾಲು ಸಾಲು, ದೊಡ್ಡ ದೊಡ್ಡ, ಹಾದಿ ಬೀದಿ, ಮತ್ತೆ ಮತ್ತೆ, ನಯ ವಿನಯ, ಏಳು ಬೀಳು, ಬೇಗ ಬೇಗ, ಆಳು ಕಾಳು, ಬನ್ನಿ ಬನ್ನಿ, ಬಿಸಿ ಬಿಸಿ, ಥಳ ಥಳ, ಸಿಹಿಕಹಿ, ಅಲ್ಲಲ್ಲಿ, ರಾಶಿ ರಾಶಿ.

______________________ ______________________

______________________ ______________________

______________________ ______________________

______________________ ______________________

______________________ ______________________

@KTBS NOT TO BE REPUBLISHED

# 4. ಜೋಡು ನುಡಿಗಳು

## 1 ಅ. ನಮ್ಮನ್ನು ಮತ್ತೆ ಬರೆಯಿರಿ.

| | | | |
|---|---|---|---|
| ನಡೆ – ನುಡಿ | | ಗೊತ್ತು – ಗುರಿ | |
| ಮನೆ – ಮಠ | | ಹಣ್ಣು – ಹಂಪಲು | |
| ಸಿಹಿ – ಕಹಿ | | ಮಾತು – ಕತೆ | |
| ಹಾದಿ – ಬೀದಿ | | ಹಗಲು– ರಾತ್ರಿ | |
| ಹಣ – ಕಾಸು | | ಅಕ್ಕ – ತಂಗಿ | |
| ತಿಂಡಿ – ತೀರ್ಥ | | ಸುತ್ತ – ಮುತ್ತ | |
| ಆಳು – ಕಾಳು | | ಅಕ್ಕ – ಪಕ್ಕ | |
| ನಯ – ವಿನಯ | | ಗೆಡ್ಡೆ – ಗೆಣಸು | |
| ತಿಂಡಿ – ತಿನಿಸು | | ನಾಡು – ನುಡಿ | |
| ಕಾಡು – ಮೇಡು | | ದವಸ – ಧಾನ್ಯ | |
| ಏಳು –ಬೀಳು | | ಕೆರೆ – ಕಟ್ಟೆ | |
| ಮೇಲೆ – ಕೆಳಗೆ | | ಆಸ್ತಿ – ಪಾಸ್ತಿ | |
| ಹಬ್ಬ – ಹರಿದಿನ | | ಬೆಟ್ಟ – ಗುಡ್ಡ | |
| ಅದಲು – ಬದಲು | | ಕಷ್ಟ – ಸುಖ | |
| ಅವಳಿ – ಜವಳಿ | | ಸಿರಿ – ಸಂಪತ್ತು | |

ಇವು ಏನೆಂದು ಗೆಳೆಯರಲ್ಲಿ ಕೇಳಿ ತಿಳಿಯಿರಿ.

@KTBS NOT TO BE REPUBLISHED

**ಆ. ಅಡಿ ಗೆರೆ ಎಳೆದ ಪದಗಳನ್ನು ಮಾತ್ರ ಬರೆಯಿರಿ.**

**ಮಾದರಿ :** ನಾವು ನಾಡು–ನುಡಿಯನ್ನು ಗೌರವಿಸಬೇಕು. ನಾಡು – ನುಡಿ

1. ಪ್ರತಿದಿನದ ಆಹಾರದಲ್ಲಿ ಸೊಪ್ಪು–ತರಕಾರಿ ಇರಬೇಕು. ______________

2. ಯುಗಾದಿಯ ದಿನ ಕಷ್ಟ ಸುಖವನ್ನು ಸಮವಾಗಿ ಸ್ವೀಕರಿಸುವ ಶಕ್ತಿ ಬರಲೆಂದು ಬೇವು–ಬೆಲ್ಲವನ್ನು ತಿನ್ನುತ್ತೇವೆ. ______________

3. ಜೀವನದಲ್ಲಿ ಬರುವ ನೋವು–ನಲಿವುಗಳನ್ನು ಕುಗ್ಗದೆ ಹಿಗ್ಗದೆ ಅನುಭವಿಸಬೇಕು. ______________

4. ಮಕ್ಕಳಿಗೆ ಸುಂದರ ವೇಷ–ಭೂಷಣಗಳನ್ನು ತೊಡಿಸಿ ಆನಂದಿಸುತ್ತೇವೆ. ______________

5. ಹಿರಿಯರಿಂದ ನಾವು ಉತ್ತಮ ರೀತಿ–ನೀತಿಗಳನ್ನು ತಿಳಿದುಕೊಳ್ಳಬೇಕು. ______________

6. ಪ್ರತಿದಿನ ಹಣ್ಣು–ಹಂಪಲುಗಳನ್ನು ತಿನ್ನುವ ಅಭ್ಯಾಸ ಮಾಡಿಕೊಳ್ಳಬೇಕು. ______________

7. ವಿದ್ಯಾರ್ಥಿಗಳು ತಾವು ಬರೆದ ವಿವರಗಳನ್ನು ಅದಲು–ಬದಲು ಮಾಡಿಕೊಂಡು ಓದಿ ಸಂತೋಷ ಪಟ್ಟರು. ______________

8. ಹಗಲು ವೇಷಧಾರಿಗಳು ಊರು–ಕೇರಿಗಳಲ್ಲಿ ತಿರುಗುತ್ತಾ ಮನೆ ಮನೆಗಳಲ್ಲಿ ಅಭಿನಯ ಪ್ರದರ್ಶಿಸುತ್ತಾರೆ. ______________

9. ತಮ್ಮ ತಮ್ಮ ಮನೆ–ಮಠಗಳನ್ನು ಚೊಕ್ಕಟವಾಗಿಡುವುದು ಅವರವರ ಕರ್ತವ್ಯ. ______________

@KTBS NOT TO BE REPUBLISHED

10. ಅಲ್ಲಲ್ಲಿ ಕಸ-ಕಡ್ಡಿಗಳ ರಾಶಿಗಳಿದ್ದರೆ ಹುಳು-ಹುಪ್ಪಟೆಗಳು ತುಂಬಿಕೊಳ್ಳುತ್ತವೆ.

____________________

11. ನಮ್ಮ ನಡೆ- ನುಡಿಗಳು ಬೇರೆಯವರಿಗೆ ಮಾದರಿಯಾಗಿರಬೇಕು.

____________________

12. ಪೃಥ್ವಿ ಮತ್ತು ಗಾನ ಇವರು ತಮ್ಮ ಪೆನ್ನುಗಳನ್ನು ಅದಲು-ಬದಲು ಮಾಡಿಕೊಂಡರು.

____________________

ಬರೆದ ಪದಗಳನ್ನು ಗಮನಿಸಿರುವಿರಾ...? ಇವು 'ಜೋಡುನುಡಿ'ಗಳು

**ಇ. ಪದಗಳಿಗೆ ವಾಕ್ಯಗಳನ್ನು ರಚಿಸಿ.**

**ಮಾದರಿ : ಸುತ್ತ-ಮುತ್ತ : ನಮ್ಮ ಸುತ್ತ ಮುತ್ತಲಿನ ಪರಿಸರ ಚೊಕ್ಕಟವಾಗಿರಬೇಕು.**

| | |
|---|---|
| 1) ಹಬ್ಬ-ಹರಿದಿನ | : |
| 2) ರೀತಿ-ನೀತಿ | : |
| 3) ಅದಲು-ಬದಲು | : |
| 4) ಹಗಲು-ರಾತ್ರಿ | : |
| 5) ಕಷ್ಟ-ಸುಖ | : |
| 6) ಮಾನ-ಮರ್ಯಾದೆ: | : |

@KTBS NOT TO BE REPUBLISHED

**ಈ. ನಿಮಗೆ ತಿಳಿದಿರುವ ಜೋಡುನುಡಿಗಳನ್ನು ಬರೆಯಿರಿ.**

**ಉ. ಜೋಡು ನುಡಿಗಳನ್ನು ಮಾತ್ರ ಆರಿಸಿ ಬರೆಯಿರಿ.**

ಬರಿ–ಸಂಪತ್ತು, ಕೇಳಿ–ಕೇಳಿ, ಅವಳಿ–ಜವಳಿ, ಕೆರೆ–ಕಟ್ಟೆ, ಚಿಕ್ಕ–ಚಿಕ್ಕ, ದೊಡ್ಡ–ದೊಡ್ಡ, ಬಿಸಿ–ಬಿಸಿ, ಬನ್ನಿ–ಬನ್ನಿ, ಅಕ್ಕ–ಪಕ್ಕ, ಅಕ್ಕ–ತಂಗಿ, ಆಳು–ಕಾಳು, ತಿನ್ನು–ತಿನ್ನು, ಬೇಗ–ಬೇಗ, ಬಿಸಿ–ಬಿಸಿ, ಬೆಟ್ಟ–ಗುಡ್ಡ ಹಣ–ಕಾಸು, ನಾಡು–ನುಡಿ, ಗೆಡ್ಡೆ–ಗೆಣಸು.

@KTBS NOT TO BE REPUBLISHED

**ಊ. ಜೋಡು ನುಡಿಗಳನ್ನು ಬಳಸಿ ಸ್ವಂತವಾಕ್ಯ ಮಾಡಿರಿ.**

| |
|---|
| 1. |
| 2. |
| 3. |
| 4. |
| 5. |

# 5. ದೇಶಿಯ–ಅನ್ಯದೇಶೀಯ ಪದಗಳು

## 1. ಓದುತ್ತಾ ಬರೆಯಿರಿ.

| | | | | | |
|---|---|---|---|---|---|
| ಅಂಗಿ | ಐದು | ಕೋಸಂಬರಿ | ನೇರಳೆ | ಮಂಡಕ್ಕಿ | ಬೆಣ್ಣೆ |
| | | | | | |
| ಅಕ್ಕಿ | ಒಸಡು | ಕೋಟೆ | ನೀರು | ಮಜ್ಜಿಗೆ | ಮೊಲ |
| | | | | | |
| ಆಕಳು | ಔತಣ | ಕೋತಿ | ನೊಣ | ಮೊಸರು | ರೆಕ್ಕೆ |
| | | | | | |
| ಅರಸ | ಕಣ್ಣು | ಕೆನ್ನೆ | ನಸುಕು | ಮಗ್ಗಿ | ರಾಗಿ |
| | | | | | |
| ಅಗಸ | ಕುರುಡು | ಕೆಂಪು | ಪಡುವಣ | ಮಣ್ಣು | ಲಾವಣಿ |
| | | | | | |
| ಈಚಲ | ಕಿವಿ | ಗಂಟಲು | ಪನ್ನೀರು | ಮರಳು | ಸಬ್ಬಕ್ಕಿ |
| | | | | | |
| ಉದ್ದು | ಕುರಿ | ಗರಗಸ | ಪಟ್ಟಣ | ಮೂಗು | ಸಜ್ಜಿಗೆ |
| | | | | | |
| ಊರು | ಶಾಲೆ | ಗುಡಿಸು | ಪಲ್ಲಕ್ಕಿ | ಮುಂಜಾನೆ | ಹಣ್ಣು |
| | | | | | |
| ಉಗುರು | ಕಾಡು | ಚೇಳು | ಪೊಟ್ಟಣ | ಮೂಳೆ | ಹಿತ್ತಾಳೆ |
| | | | | | |
| ಎಳ್ಳು | ಕೊಂಬೆ | ಟಗರು | ಬೆಕ್ಕು | ಮೂಲಂಗಿ | ಹಲ್ಲಿ |
| | | | | | |
| ಎಂಟು | ಕೋಳಿ | ಜೇನು | ಬಾಚಣಿಗೆ | ಮೆಂತ್ಯ | ಹಾಲು |
| | | | | | |

**ಹೆಚ್ಚಿನ ಮಾಹಿತಿಗಾಗಿ:** ಇವು ಅಚ್ಚಗನ್ನಡದ ಪದಗಳು, ಇವನ್ನು 'ದೇಶೀಯಪದ'ಗಳೆನ್ನುವರು.

© KTBS NOT TO BE REPUBLISHED

## 2. ಓದಿ ಬರೆಯಿರಿ.

| | | | |
|---|---|---|---|
| ಕಾರು | ಸ್ಕೂಲು | ಸ್ಲೇಟು | ಪೆನ್ನು |
| | | | |
| ಇಂಕು | ನಿಬ್ಬು | ಕಾಲೇಜು | ರಿಪೇರಿ |
| | | | |
| ಅಸಲಿ | ಅಮಾನತ್ತು | ಕಸುಬು | ಗಲೀಜು |
| | | | |
| ಸಹಿ | ಇಲಾಖೆ | ಮಾರುಕಟ್ಟೆ | ಸೈಕಲ್ |
| | | | |
| ರೈಲು | ವಾಚು | ಕಾಗದ | ಖಜಾನೆ |
| | | | |
| ಜಾಹೀರಾತು | ಜಿಲ್ಲೆ | ತಾರೀಖು | ತರಕಾರಿ |
| | | | |
| ಚಪಾತಿ | ಶಿಫಾರಸ್ಸು | ಪಾನೀಯ | ಸಾಬೂನು |
| | | | |
| ಬಟಾಣಿ | ಕರ್ಬೂಜ | ಮೈದಾನ | ಕಛೇರಿ |
| | | | |
| ನೌಕರಿ | ಖರ್ಚು | ಗುಲಾಬಿ | ತನಿಖೆ |
| | | | |
| ತಂಬೂರಿ | ಕುರ್ಚಿ | ದುರಸ್ತಿ | ಪಾದ್ರಿ |
| | | | |
| ಸಾಹೇಬ | ಜವಾನ | ಜಮೀನು | ಮೊಹರು |
| | | | |

**ಹೆಚ್ಚಿನ ಮಾಹಿತಿಗಾಗಿ :** ಮೇಲಿನ ಪದಗಳು ಬೇರೆ ಭಾಷೆಯಿಂದ ಕನ್ನಡಕ್ಕೆ ಬಂದಿವೆ. ಇವನ್ನು 'ಅನ್ಯದೇಶೀಯಪದ'ಗಳೆನ್ನುವರು.

@KTBS NOT TO BE REPUBLISHED

**3. ದೇಶೀಯ, ಅನ್ಯದೇಶೀಯ ಪದಗಳನ್ನು ವಿಂಗಡಿಸಿ ಬರೆಯಿರಿ.**

**ಕೆಂಪು, ಪನ್ನೀರು**
**ಸ್ಲೇಟು, ರಾಗಿ, ಉಗುರು, ಕಾಗದ,**
**ಕೋಳಿ, ರೈಲು, ಸ್ಕೂಲು, ಕುರ್ಚಿ,**
**ಹಾಲು, ವಾಚು, ಸಜ್ಜಿಗೆ, ನೇರಳೆ, ಸಾಬೂನು,**
**ಮೂಲಂಗಿ, ತಾರೀಖು, ಔತಣ,**
**ಕಾಲೇಜು, ಇಲಾಖೆ,**

| ದೇಶೀಯ ಪದಗಳು | ಅನ್ಯದೇಶೀಯ ಪದಗಳು |
|---|---|
| | |
| | |
| | |
| | |
| | |
| | |
| | |
| | |

@KTBS
NOT TO BE REPUBLISHED

**4. ನಿಮಗೆ ತಿಳಿದಿರುವ ಯಾವುದಾದರೂ ಅನ್ಯದೇಶೀಯ ಪದಗಳನ್ನು ಬರೆಯಿರಿ.**

| | |
|---|---|
| | |
| | |
| | |
| | |

# 6. ಲೇಖನ ಚಿಹ್ನೆಗಳು

## ಅ) ನನ್ನನ್ನು ಅರ್ಥೈಸಿಕೊಳ್ಳುವಿರಾ?

| | | | | | |
|---|---|---|---|---|---|
| 1. | . | ಪೂರ್ಣ ವಿರಾಮ ಚಿಹ್ನೆ | 6. | ; | ಅರ್ಧವಿರಾಮ ಚಿಹ್ನೆ |
| 2. | , | ಅಲ್ಪವಿರಾಮ ಚಿಹ್ನೆ | 7. | ? | ಪ್ರಶ್ನಾರ್ಥಕ ಚಿಹ್ನೆ |
| 3. | ! | ಭಾವಸೂಚಕ/ಆಶ್ಚರ್ಯ ಚಿಹ್ನೆ | 8. | “ ” | ಉದ್ಧರಣ ಚಿಹ್ನೆ |
| 4. | : | ವಿವರಣಾತ್ಮಕ ಚಿಹ್ನೆ | 9. | () | ಆವರಣ ಚಿಹ್ನೆ |
| 5. | + | ಅಧಿಕ ಚಿಹ್ನೆ | 10. | ‘ ’ | ವಾಕ್ಯವೇಷ್ಟನ ಚಿಹ್ನೆ |

## ಆ) ನನ್ನನ್ನು ಹೊಂದಿಸಿ.

| | | | |
|---|---|---|---|
| 1. | ಅಲ್ಪವಿರಾಮ ಚಿಹ್ನೆ | 1. ( ) | 1. |
| 2. | ಅರ್ಧವಿರಾಮ ಚಿಹ್ನೆ | 2. ! | 2. |
| 3. | ಅಧಿಕ ಚಿಹ್ನೆ | 3. : | 3. |
| 4. | ಪೂರ್ಣವಿರಾಮ ಚಿಹ್ನೆ | 4. + | 4. |
| 5. | ಆವರಣ ಚಿಹ್ನೆ | 5. , | 5. |
| 6. | ಭಾವಸೂಚಕ ಚಿಹ್ನೆ | 6. ; | 6. |
| 7. | ಉದ್ಧರಣ ಚಿಹ್ನೆ | 7. ? | 7. |
| 8. | ಪ್ರಶ್ನಾರ್ಥಕ ಚಿಹ್ನೆ | 8. . | 8. |
| 9. | ವಿವರಣಾತ್ಮಕ ಚಿಹ್ನೆ | 9. “ ” | 9. |

@KTBS NOT TO BE REPUBLISHED

**ಓದುತ್ತಾ ಬರೆಯಿರಿ.**

1. ರಹೀಮ, ಶಂಕರ ಮತ್ತು ಜಾನ್ ಈ ಮೂವರು ಗೆಳೆಯರು.

2. 'ಯಾರಪ್ಪ ನೀನು ಮಹಾತ್ಮ'? ಎಂದು ಕೇಳಿದರು.

3. ನೀನು ಯಾರು ? ಇಲ್ಲಿಗೇಕೆ ಬಂದೆ? ಎಂದರು.

4. ಅಬ್ಬಾ ! ಎಂಥ ಸುಂದರ ದೃಶ್ಯ.

5. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

6. ನನ್ನ ತಾಯಿ ಇಂದು ಆಲೂಗೆಡ್ಡೆ (ಬಟಾಟೆ) ಯ ಸಾಂಬಾರನ್ನು ತಯಾರಿಸಿದ್ದಳು.

7. ಗ್ರಂಥಗಳಲ್ಲಿ "ಧರ್ಮಕ್ಕೆ ಜಯ ಲಭಿಸುತ್ತದೆ" ಎಂದು ಹೇಳಿದೆ.

8. ಮನೆ + ಅಲ್ಲಿ = ಮನೆಯಲ್ಲಿ

9. ಪಂಚೇಂದ್ರಿಯಗಳು: ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ

10. ಈ ದಿನ ಮಳೆ ಬರುತ್ತಿತ್ತು; ಆದ್ದರಿಂದ ಆಟವಾಡಲಾಗಲಿಲ್ಲ; ನನಗೆ ಸ್ವಲ್ಪ ನಿರಾಶೆಯಾಯಿತು.

11. ನಿನ್ನೆ ಮುಖ್ಯ ಶಿಕ್ಷಕರು ತಮ್ಮ ಭಾಷಣದಲ್ಲಿ "ಪ್ರತಿಯೊಬ್ಬ ವಿದ್ಯಾರ್ಥಿಯೂ ಶ್ರದ್ಧೆ ವಹಿಸಿ ಓದಲೇಬೇಕು" ಎಂದು ಹೇಳಿದರು.

12. ನಮ್ಮ ಮನೆಯಲ್ಲಿ ನಾಯಿ, ಬೆಕ್ಕು, ಹಸು, ಎಮ್ಮೆ ಮತ್ತು ಪಾರಿವಾಳ ಇವೆ.

@KTBS NOT TO BE REPUBLISHED

**ಈ. ಕೆಳಗಿನ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನು ಹಾಕಿರಿ.**

1. ಒಂದಾನೊಂದು ಕಾಲದಲ್ಲಿ ಒಂದು ದಟ್ಟವಾದ ಅರಣ್ಯವಿತ್ತು

___

2. ಅವನು ಗಂಗೆಯಲ್ಲಿ ಮಿಂದು ಬಂದನು ಆದರೂ ಅವನಿಗೆ ಸಮಾಧಾನವಾಗಲಿಲ್ಲ

___

3. ಕನ್ನಡದಲ್ಲಿ ಅನೇಕ ಇಂಗ್ಲಿಷ್ ಪದಗಳಿವೆ

___

4. ನಿನ್ನ ಹೆಸರೇನು ನಿನ್ನ ಊರು ಯಾವುದು

___

5. ಅಯ್ಯೋ ಅವನಿಗೆ ಏನಾಯಿತು

___

6. ಅರಸನ ಮನೆ ಅರಮನೆ

___

7. ಆತನ ಬರಹವು ನೋಡಲು ಅಂದವಾಗಿಯೂ ಸ್ಫುಟವಾಗಿಯೂ ಅಚ್ಚುಕಟ್ಟಾಗಿಯೂ ಇತ್ತು

___

8. ಅಯ್ಯೋ ಅವನಿಗೆ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿತೆ

___

9. ನನ್ನ ತಾಯಿಯು ಮನೆಗೆ ಬಂದವರನ್ನು ನೋಡಿ ಯಾರಪ್ಪ ನೀನು ಮಹಾತ್ಮ ಎಂದು ಕೇಳಿದರು

___

___

@KTBS NOT TO BE REPUBLISHED

# 7. ವಿಭಕ್ತಿ ಪ್ರತ್ಯಯಗಳು

## ಅ. ಅಡಿಗೆರೆ ಹಾಕಿದ ಪದಗಳನ್ನು ಗಮನಿಸುತ್ತಾ ಓದಿರಿ.

ಒಂದು ಮಾವಿನ ಮರವು ತನ್ನ ರೆಂಬೆ ಕೊಂಬೆಗಳನ್ನು ಚಾಚಿ ದೊಡ್ಡದಾಗಿ, ಬಲಿಷ್ಠವಾಗಿ ಬೆಳೆದಿತ್ತು. ಆ ಮರವನ್ನು ಕಡಿಯಲು ಒಬ್ಬ ಮರದ ವ್ಯಾಪಾರಿಯು ನಿರ್ಧರಿಸಿದನು. ಪ್ರತಿದಿನ ಆ ಮರದಿಂದ ಹಲವಾರು ಮಾವಿನ ಹಣ್ಣುಗಳು ಕೆಳಗೆ ಬೀಳುತ್ತಿದ್ದವು. ರುಚಿಯಾದ ಹಣ್ಣುಗಳನ್ನು ತಿನ್ನಲು ಮಕ್ಕಳಲ್ಲದೆ, ದನಕರುಗಳು ಹಾಗೂ ಪ್ರಾಣಿ ಪಕ್ಷಿಗಳು ಬರುತ್ತಿದ್ದವು. ಒಂದು ದಿನ ವ್ಯಾಪಾರಿಯು ಆ ಮರಕ್ಕೆ ಗರಗಸವಿಟ್ಟು ಕತ್ತರಿಸಲು ಪ್ರಾರಂಭಿಸಿದನು. ಮೊದಲು ರೆಂಬೆಕೊಂಬೆಗಳನ್ನು ಕತ್ತರಿಸಿದನು. ಈಗ ಆ ಮರದ ದೆಸೆಯಿಂದ ಮರದಲ್ಲಿ ವಾಸವಿದ್ದ ಸಣ್ಣ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ರಕ್ಷಣೆ ಇಲ್ಲದಂತಾಯಿತು. ಮರದ ಮೇಲಿರುವ ಹಣ್ಣುಗಳು, ರೆಂಬೆ ಕೊಂಬೆಗಳು ಬೀಳತೊಡಗಿದವು. ಕೊನೆಗೆ ಆ ಮರದಲ್ಲಿ ಏನೂ ಉಳಿಯದಂತಾಗಿ ಎಲ್ಲರೂ ತೊಂದರೆ ಅನುಭವಿಸುವಂತಾಯಿತು.

ಮಕ್ಕಳೇ, ಗಿಡಮರಗಳನ್ನು ನಾಶ ಮಾಡುವುದರ ಬದಲು ಬೆಳೆಸಿ ಉಳಿಸೋಣವೇ?

ಹಸಿರೇ ಉಸಿರು ಎಂಬುವನ್ನು ಅರಿಯೋಣವೆ?

@KTBS NOT TO BE REPUBLISHED

## ಆ. ಅಡಿಗೆರೆ ಹಾಕಿದ ಪದಗಳನ್ನು ಮಾತ್ರ ಬರೆಯಿರಿ.

| | |
|---|---|
| | |
| | |
| | |
| | |

**ಮೇಲೆ ಅಡಿಗೆರೆ ಹಾಕಿದ ಪದಗಳ ಮಾದರಿಯಂತೆಯೇ ಸ್ವಂತ ಪದಗಳನ್ನು ಬರೆಯಿರಿ.**

| | |
|---|---|
| | |
| | |
| | |
| | |

ಪ್ರಿಯ ಶಿಕ್ಷಕರೇ, ಇವೇನೆಂಬುದನ್ನು ವಿದ್ಯಾರ್ಥಿಗಳಿಗೆ ಅರ್ಥೈಸಿ.

## ಇ. ಓದೋಣ ಬನ್ನಿ.

| | ವಿಭಕ್ತಿ | ಪ್ರತ್ಯಯ | ನಾಮಪದಗಳಿಗೆ ವಿಭಕ್ತಿ ಪ್ರತ್ಯಯ ಸೇರಿಸಿದಾಗ |
|---|---|---|---|
| 1. | ಪ್ರಥಮ | ಉ | ಮರ + ಉ = ಮರವು |
| 2. | ದ್ವಿತೀಯ | ಅನ್ನು | ಮರ + ಅನ್ನು = ಮರವನ್ನು |
| 3. | ತೃತೀಯ | ಇಂದ | ಮರ + ಇಂದ = ಮರದಿಂದ |
| 4. | ಚತುರ್ಥಿ | ಗೆ, ಕ್ಕೆ, ಇಗೆ | ಮರ + ಕ್ಕೆ = ಮರಕ್ಕೆ |
| 5. | ಪಂಚಮಿ | ದೆಸೆಯಿಂದ | ಮರ + ದೆಸೆಯಿಂದ = ಮರದ ದೆಸೆಯಿಂದ |
| 6. | ಷಷ್ಠಿ | ಅ | ಮರ + ಅ = ಮರದ |
| 7. | ಸಪ್ತಮಿ | ಅಲ್ಲಿ | ಮರ + ಅಲ್ಲಿ = ಮರದಲ್ಲಿ |

## ಈ. ಈಗ ಬರೆಯಿರಿ.

| | | | |
|---|---|---|---|
| 1. | | | ಕೋಗಿಲೆ |
| 2. | | | |
| 3. | | | |
| 4. | | | |
| 5. | | | |
| 6. | | | |
| 7. | | | |

## ಉ. ನೀವೇ ಬರೆಯಿರಿ. (ಕೊಟ್ಟಿರುವ ನಾಮಪದಗಳಿಗೆ ವಿಭಕ್ತಿ, ಪ್ರತ್ಯಯಗಳನ್ನು ಸೇರಿಸಿ)

| | | | |
|---|---|---|---|
| 1. | | | ಮನೆ |
| 2. | | | |
| 3. | | | |
| 4. | | | |
| 5. | | | |
| 6. | | | |
| 7. | | | |

@KTBS NOT TO BE REPUBLISHED

**ಊ. ಕೊಟ್ಟಿರುವ ನಾಮ ಪದಗಳಿಗೆ ವಿಭಕ್ತಿ, ಪ್ರತ್ಯಯಗಳನ್ನು ಬರೆಯಿರಿ.**

| | | | |
|---|---|---|---|
| 1. | | | ಶಾಲೆ |
| 2. | | | |
| 3. | | | |
| 4. | | | |
| 5. | | | |
| 6. | | | |
| 7. | | | |

**ಋ. ಪರಸ್ಪರ ಸಂಬಂಧವಿರುವಂತೆ ಪ್ರತ್ಯಯಗಳನ್ನು ಬಳಸಿ ವಾಕ್ಯ ರಚಿಸಿ.**

1. ಮುದುಕಿ, ಮಗು, ಪ್ರೀತಿ, ಬೆಳೆಸಿ

___

2. ಹುಡುಗ, ಸಿಹಿ, ಮಾವು, ಹಣ್ಣು, ತಿಂದು, ಹಾಲು, ಕುಡಿ

___

3. ತಾಯಿ, ಮಗು, ಪ್ರೀತಿ, ಊಟ, ಮಾಡಿಸಿದಳು.

___

@KTBS NOT TO BE REPUBLISHED

**ಎ. ವಾಕ್ಯಗಳನ್ನು ಪೂರ್ಣಗೊಳಿಸಿ.**

**ಮಾದರಿ** : ತಿಮ್ಮ ____ ತೋಟ ____ ಸುತ್ತ ಬೇಲಿ ___ ಹಾಕಿದನು.

ತಿಮ್ಮನು ತೋಟದ ಸುತ್ತ ಬೇಲಿಯನ್ನು ಹಾಕಿದನು.

1. ನನ್ನ ಮನೆ ____ ಅಕ್ಕ ____ ಮಗು ____ ಹುಟ್ಟಿದ ಹಬ್ಬ____ ಆಚರಿಸಲು ಪಕ್ಕದ ಮನೆಯ_____ ಬಂದಿದ್ದರು.

___

___

2. ಒಬ್ಬ ಹುಡುಗ ____ ಕೊಡಲಿ ____ ಹಿಡಿ ____ಕೊಂಡು ಕಾಡಿ ____ ಹೊರಟನು. ನದಿ ____ ದಡ ____ ಒಂದು ದೊಡ್ಡ ಮರವಿತ್ತು.

___

___

3. ಒಬ್ಬ ಅಗಸ ____ ಬಟ್ಟೆ ____ ಒಗೆಯಲು ಕೆರೆ ____ ಬಂದನು. ಬಟ್ಟೆ ____ ಒಗೆಯುವಾಗ ಅವನ ಸ್ನೇಹಿತನೂ ಅಲ್ಲಿ ____ ಬಂದು ಮಾತನಾಡಲು ಪ್ರಾರಂಭಿಸಿದನು. ಸ್ನೇಹಿತನ ______ ಬಟ್ಟೆ ಒಗೆಯುವ ಕೆಲಸ ಅರ್ಧಕ್ಕೆ ನಿಂತಿತು.

---

---

**ಏ. ಇವು ಯಾವ ವಿಭಕ್ತಿಗೆ ಸೇರಿವೆ? ಆ ವಿಭಕ್ತಿ ಪ್ರತ್ಯಯಗಳು ಯಾವುವೆಂಬುದನ್ನು ಬರೆಯಿರಿ.**

| | **ಮಾದರಿ :** | **ವಿಭಕ್ತಿ** | **ಪ್ರತ್ಯಯ** |
|---|---|---|---|
| | ಕೋಗಿಲೆಯು ಕೂಗುತ್ತಿದೆ. | ಪ್ರಥಮ | ಉ |
| 1. | ದೇವರಲ್ಲಿ ಭಕ್ತಿಯನ್ನು ಇಡು. | | |
| 2. | ಸೀತೆಯು ಹಾಡನ್ನು ಹಾಡಿದಳು. | | |
| 3. | ಮರದಿಂದ ಎಲೆಗಳು ಉದುರಿದವು. | | |
| 4. | ಮಗುವಿಗೆ ಸಿಹಿ ಇಷ್ಟ. | | |
| 5. | ಊರಿನಲ್ಲಿ ಭಜನೆಯು ನಡೆಯುತ್ತಿದೆ. | | |
| 6. | ತಾಯಿ ತಂದೆಗೆ ನಮಸ್ಕರಿಸಿ. | | |
| 7. | ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ. | | |
| 8. | ಕೋಪವನ್ನು ಶಾಂತಿಯಿಂದ ಗೆಲ್ಲಬೇಕು. | | |

**ಐ. ವಾಕ್ಯಕ್ಕೆ ಹೊಂದುವಂತೆ ಪದ ಜೋಡಿಸಿ ಬರೆಯಿರಿ.**

1. ಇದ್ದ, ಗುಡಿಸಲಿನಲ್ಲಿ, ಇಲಿಗಳು, ಇದ್ದ, ಮುದುಕನ, ತಿಂದವು, ಚೀಲದಲ್ಲಿ, ಅಕ್ಕಿಯನ್ನು

---

©KTBS NOT TO BE REPUBLISHED

2. ಬಲೆಯಲ್ಲಿ, ಕೀಟಗಳು, ಸಿಕ್ಕಿ ಕೊಂಡ, ಬರದಂತಾದವು, ಹೊರಗೆ

---

3. ಗೊಲ್ಲನು, ಬಂದಿತು, ತೋಳ, ಕಾಯುತ್ತಿದ್ದಾಗ, ಕುರಿಗಳನ್ನು, ಒಂದು, ಅಲ್ಲಿಗೆ

---

4. ಪಾಯಸ, ಗೊಜ್ಜು, ಅಜ್ಜಿಯು, ಕಜ್ಜಾಯವನ್ನು, ನಿನ್ನೆ, ಮತ್ತು, ಮಾಡಿದ್ದಳು, ಹೋಳಿಗೆ

---

5. ತೋಟಕ್ಕೆ, ತರಕಾರಿಯನ್ನು ತಾಯಿಯು, ಮಾಡಿದಳು, ಕಿತ್ತು, ತಂದು, ಹೋಗಿ, ಅಡುಗೆಯನ್ನು

---

6. ಸರ್ಕಾರಿ, ನಾನು, ಓದುತ್ತಿದ್ದೇನೆ, ಶಾಲೆಯಲ್ಲಿ, ಈಗ

---

NOT TO BE REPUBLISHED @KTBS

**ಒ. ಚಿತ್ರ ನೋಡಿ ಪದ ಗುರುತಿಸಬಲ್ಲಿರಾ? ಪದದ ಜೊತೆಗೆ ಪ್ರತ್ಯಯವನ್ನು ಗುರುತಿಸಿ.**

## ಆನೆಯ ದಂತ

ಒಂದು ಊರಿನಲ್ಲಿ ಒಂದು  ಇತ್ತು. ಈ  ಗೆ ಒಂದು ಗುಬ್ಬಚ್ಚಿ, ಒಂದು ಎಮ್ಮೆ, ಒಬ್ಬ ಹುಡುಗ ತಿಮ್ಮ – ಹೀಗೆ ಮೂವರು ಗೆಳೆಯರಿದ್ದರು. ಆ  ಯನ್ನು ಕಂಡರೆ ಈ ಮೂವರು ಗೆಳೆಯರಿಗೂ ಒಲವು. ಅಬ್ಬಬ್ಬಾ !  ಯ ಎತ್ತರ, ಅದರ ದೊಡ್ಡ ದೇಹ, ಅಗಲವಾದ ಕಿವಿ, ಸಣ್ಣ ಕಣ್ಣು, ತೂಗಾಡುವ ಸೊಂಡಿಲು, ಬೆಳ್ಳಗೆ ಹೊಳೆಯುವ ದಂತ ಎಲ್ಲವೂ ಅವರಿಗೆ ಅಚ್ಚುಮೆಚ್ಚು.

ಒಂದು ದಿನ ಆ ಊರಿಗೆ ಕತ್ತಲಲ್ಲಿ ಇಬ್ಬರು ಕಳ್ಳರು ಬಂದರು.  ಯನ್ನು ಮರಕ್ಕೆ ಹಗ್ಗದಿಂದ ಕಟ್ಟಿ ಹಾಕಿದರು.  ಯ ದಂತವನ್ನು ಕೊಯ್ಯಲು ಹವಣಿಸಿದರು. ಅದೇ ಮರದ ಮೇಲೆ  ಯ ಗೆಳೆಯ ಗುಬ್ಬಚ್ಚಿ ಕುಳಿತಿತ್ತು.  ಗೆ ಆದ ಪಾಡು ನೋಡಿ ಪುರ್ರನೆ ಹಾರಿ ಬಂದು ಎಮ್ಮೆಗೆ ಹೇಳಿತು. ಕೂಡಲೇ ಎಮ್ಮೆ ತಿಮ್ಮನಿಗೆ ತಿಳಿಸಿತು.

ಆಗ  ಗಾಗಿ ತಿಮ್ಮ ಓಡೋಡಿ ಬಂದ. ಅವನ ಅಜ್ಜ, ಅಪ್ಪ, ಅವ್ವ ಎಲ್ಲರೂ ಹಿಂದೆಯೇ ಓಡಿ ಬಂದರು. 'ಅಯ್ಯಯ್ಯೋ, ಊರ ಜನರೇ ಎದ್ದೇಳಿ  ಯ ದಂತ ಉಳಿಸಿ, ಎಂದು ಬೊಬ್ಬೆ ಹಾಕಿದರು. ಜನರೆಲ್ಲ ಬಂದರು, ಕಳ್ಳರನ್ನು ಹಿಡಿದರು.  ಯನ್ನು ಬಿಡಿಸಿದರು.  ಯ ದಂತವನ್ನು ಉಳಿಸಿದರು.

@KTBS
NOT TO BE REPUBLISHED



ಗೆಳೆಯರ ಸಹಾಯಕ್ಕೆ  ಯು ಸೊಂಡಿಲೆತ್ತಿ ಸಲಾಮು ಮಾಡಿತು. ಎಲ್ಲರೂ ಸಂತೋಷದಿಂದ ಹ್ಹಹ್ಹ ಹ್ಹಾ... ಎಂದು ಚಪ್ಪಾಳೆ ತಟ್ಟಿ ಕುಣಿದರು.

**ಶಿಕ್ಷಕರಿಗೆ ಸೂಚನೆ :**

1. ಆನೆಯ ಚಿತ್ರವನ್ನು ಪ್ರತಿಬಾರಿ ಆನೆ ಎಂದು ಓದಿಸಿ, ಪ್ರತ್ಯಯಗಳನ್ನು ಪರಿಚಯಿಸಿ.

   ಆನೆ | ಆನೆ ಯ | ಆನೆ ಗೆ | ಆನೆ ಗಾಗಿ | ಆನೆ ಯನ್ನು | ಆನೆ ಯು

2. ಕಥೆಯಲ್ಲಿ ಚಿಹ್ನೆಗಳನ್ನು ಅರ್ಥಪೂರ್ಣವಾಗಿ ಓದಿ ತೋರಿಸಿ.

   ಪೂರ್ಣ ವಿರಾಮ .   ಆಶ್ಚರ್ಯ !   ಅರ್ಧ ವಿರಾಮ ,

   ಪ್ರಶ್ನೆ ?

3. ಈ ಕಥೆಯಲ್ಲಿ ಬರುವ ಹತ್ತೊಂಭತ್ತು ಸಜಾತಿ ಒತ್ತಕ್ಷರ ಪದಗಳನ್ನು ಬರೆಸಿ.

**ಈ ಪಾಠದಲ್ಲಿ ಗುರುತಿಸಿದ ಪ್ರತ್ಯಯಗಳನ್ನು ಒಮ್ಮೆ ಬರೆಯಿರಿ.**

| | | | |
|---|---|---|---|
| | | | |
| | | | |

**ಈ ಪಾಠದಲ್ಲಿ ಬಂದಿರುವ ಎಲ್ಲಾ ವಿರುದ್ಧ ಪದಗಳನ್ನು ಆರಿಸಿ ಬರೆಯಿರಿ.**

| | | |
|---|---|---|
| | | |
| | | |

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕಥೆಗಳನ್ನು ಆಲಿಸಿ, ವಿಶ್ಲೇಷಿಸುವೆ. | | | |
| 2. | ಲೇಖನ ಚಿಹ್ನೆಗಳನ್ನು ಬಳಸಿ ವಾಕ್ಯ ರಚಿಸುವೆ. | | | |
| 3. | ಜೋಡು ನುಡಿಗಳನ್ನು ವಾಕ್ಯಗಳಲ್ಲಿ ಬಳಸುವೆ. | | | |
| 4. | ಪ್ರಾಸಬದ್ಧವಾಗಿ ಪದ್ಯಗಳನ್ನು ರಚಿಸುವೆ. | | | |

**ಶಿಕ್ಷಕರ ಅಭಿಪ್ರಾಯ:**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 8. ಕಿರುಪರೀಕ್ಷೆ – 1

**ಅ. ಪ್ರಾಸಪದಗಳನ್ನು ಬರೆಯಿರಿ.**

ಹುತ್ತರಿ, ಮಣಿಸು, ಜನನ, ದಾರಿಗೆ, ಕತ್ತರಿ, ತಣಿಸು, ಮನನ, ಸಾರಿಗೆ

| | |
|---|---|
| | |
| | |

**ಆ. ಯಾವುದಾದರು ಎಂಟು ದ್ವಿರುಕ್ತಿ ಪದಗಳನ್ನು ಬರೆಯಿರಿ.**

| | |
|---|---|
| | |
| | |
| | |
| | |

@KTBS NOT TO BE REPUBLISHED

**ಇ. ಕೆಳಗಿನ ವಾಕ್ಯಗಳಲ್ಲಿ ಜೋಡುನುಡಿಗಳಿಗೆ ಗೆರೆ ಎಳೆದು ಆರಿಸಿ ಬರೆಯಿರಿ.**

1. ಹಣ್ಣು-ಹಂಪಲುಗಳ ಸೇವನೆ ಆರೋಗ್ಯಕ್ಕೆ ಒಳ್ಳೆಯದು.
2. ಶಾಲಾ ಮಕ್ಕಳು ರಾಷ್ಟ್ರನಾಯಕರ ವೇಷ-ಭೂಷಣವನ್ನು ತೊಟ್ಟರು.
3. ನಿರ್ಗತಿಕರಿಗೆ ಮನೆ-ಮಠಗಳು ಇಲ್ಲವಾಗಿವೆ.
4. ಹಿರಿಯರ ನಡೆ-ನುಡಿಗಳು ನಮಗೆ ಅವಶ್ಯಕ.

**4. ಈ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

1. ನೋವು-ನಲಿವು ________________________________

2. ರೀತಿ-ನೀತಿ ________________________________

3. ಹಗಲು – ರಾತ್ರಿ ______________________

4. ಅದಲು – ಬದಲು ______________________

**ಉ. ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ.**

1. ಕರ್ನಾಟಕ ರಾಜ್ಯದ ರಾಜಧಾನಿ ಯಾವುದು

______________________

2. ನೀರು ಸಕ್ಕರೆ ನಿಂಬೆಹಣ್ಣು ಏಲಕ್ಕಿ ಬೆರೆಸಿ ನಿಂಬೆ ಶರಬತ್ತು ಮಾಡುವರು

______________________

3. ಪ್ರತಿ ನಿತ್ಯ ಯೋಗಾಸನವನ್ನು ಅಭ್ಯಾಸ ಮಾಡಬೇಕು

______________________

4. ಶಾಲೆಯಲ್ಲಿ ಪರಿಸರ ದಿನವನ್ನು ಆಚರಿಸಿದೆವು

______________________

@KTBS NOT TO BE REPUBLISHED

**ಊ. ನಿಮಗೆ ತಿಳಿದಿರುವ ದೇಶೀಯ ಮತ್ತು ಅನ್ಯದೇಶೀಯ ಪದಗಳನ್ನು ಬರೆಯಿರಿ.**

______________________

______________________

______________________

______________________

______________________

______________________

| ಶಿಕ್ಷಕರ ಅಭಿಪ್ರಾಯ: | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

# 9. ವಚನಗಳು

## ಅ. ನಮ್ಮನ್ನು ಹೊಂದಿಸಿ

| ಮಾದರಿ – ತಾಯಿ | | | ತಾಯಿ – ತಾಯಂದಿರು |
|---|---|---|---|
| 1. | ಬೆಸ್ತ | ಮಕ್ಕಳು | 1. |
| 2. | ಅಕ್ಕ | ಮಹಿಳೆಯರು | 2. |
| 3. | ಅರಸ | ತಾಯಂದಿರು | 3. |
| 4. | ನೀನು | ಮರಗಳು | 4. |
| 5. | ಅದು | ಪುಸ್ತಕಗಳು | 5. |
| 6. | ಮಗು | ಬೆಸ್ತರು | 6. |
| 7. | ಮರ | ಅರಸರು | 7. |
| 8. | ಪಕ್ಷಿ | ನೀವು | 8. |
| 9. | ಸ್ತ್ರೀ | ಶಿಕ್ಷಕಿಯರು | 9. |
| 10. | ರೈತ | ಅಕ್ಕಂದಿರು | 10. |
| 11. | ಶಿಕ್ಷಕಿ | ಪಕ್ಷಿಗಳು | 11. |
| 12. | ಅಣ್ಣ | ಶಾಲೆಗಳು | 12. |
| 13. | ಮಹಿಳೆ | ಮಾತೆಯರು | 13. |
| 14. | ತಾಯಿ | ಅಣ್ಣಂದಿರು | 14. |
| 15. | ಪುಸ್ತಕ | ಸ್ತ್ರೀಯರು | 15. |
| 16. | ಶಾಲೆ | ಇವು | 16. |
| 17. | ಮಾತೆ | ಅವು | 17. |
| 18. | ಇದು | ರೈತರು | 18. |

@KTBS NOT TO BE REPUBLISHED

**ಆ. ಕೆಳಗಿನ ವಾಕ್ಯಗಳನ್ನು ಗಮನಿಸಿ. ಬಿಟ್ಟ ಸ್ಥಳಗಳನ್ನು ತುಂಬಿರಿ.ನಕಲು ಮಾಡಿರಿ.**

1. ಮಗು ಇಂದು ನಗುನಗುತ್ತಾ ಆಡುತ್ತಿತ್ತು.
   ಮಕ್ಕಳು ಇಂದು ನಗುನಗುತ್ತಾ ________

   ________________________________

   ________________________________

2. ಒಂದು ಮರದ ಮೇಲೆ ಒಂದು ಕಾಗೆಯು ವಾಸವಾಗಿತ್ತು.
   ಒಂದು ಮರದ ಮೇಲೆ ಹಲವು ________ ವಾಸವಾಗಿದ್ದವು.

   ________________________________

   ________________________________

3. ಇದು ಮುಂದೆ ಬೆಳೆದು ಹೆಮ್ಮರವಾಗುವ ಸಸಿ.
   ಇವು ಮುಂದೆ ಬೆಳೆದು ಹೆಮ್ಮರವಾಗುವ ________

   ________________________________

   ________________________________

4. ನೀವು ಸಿಂಹಗಳನ್ನು ಚಿತ್ರಪಟಗಳಲ್ಲಿ, ಸಿನಿಮಾ ಮಂದಿರಗಳಲ್ಲಿ ನೋಡಿರಬಹುದು.
   ________ ಸಿಂಹವನ್ನು ಚಿತ್ರಪಟದಲ್ಲಿ, ಸಿನಿಮಾಮಂದಿರದಲ್ಲಿ ನೋಡಿರಬಹುದು.

   ________________________________

   ________________________________

5. ತಮ್ಮನು ನನಗಾಗಿ ತಿಂಡಿಯನ್ನು ತಂದಿದ್ದನು.
   ______ ನಮಗಾಗಿ ತಿಂಡಿಯನ್ನು ತಂದಿದ್ದರು.

   ________________________________

   ________________________________

@KTBS NOT TO BE REPUBLISHED

**ಇ. ನಮ್ಮನ್ನು ಸರಿಪಡಿಸಿ ಬರೆಯಿರಿ.**

1. ನಾವು ಶಾಲೆಗೆ <u>ಹೋಗುತ್ತೇನೆ.</u>

___________________________

2. ಅವರು ಕಥೆ <u>ಬರೆಯುತ್ತಾನೆ.</u>

___________________________

3. ನಮ್ಮ ತರಗತಿಯಲ್ಲಿ <u>ಹುಡುಗ</u> ಇದ್ದಾರೆ.

___________________________

4. ಸಭೆಯಲ್ಲಿ ತುಂಬಾ <u>ಮಹಿಳೆ</u> ಇದ್ದರು.

___________________________

5. ಜಾತ್ರೆಗೆ ತುಂಬಾ ಅಂಗಡಿಗಳು <u>ಬಂತು.</u>

___________________________

6. ನೀನು ಯಾವ ಊರಿಗೆ ಹೊರಟಿದ್ದೀರಿ?

___________________________

NOT TO BE REPUBLISHED @KTBS

**ಈ. ವಚನ ಬದಲಿಸಿ ಬರೆಯಿರಿ.**

| | |
|---|---|
| 1. ಚಿತ್ರ – ________ | 6. ಪುಸ್ತಕ – ________ |
| 2. ಶಾಲೆ – ________ | 7 ಅಣ್ಣ – ________ |
| 3. ಹುಡುಗಿ – ________ | 8. ಅಕ್ಕ – ________ |
| 4. ಶಿಕ್ಷಕಿ – ________ | 9. ಬಾಲಕ – ________ |
| 5 ರೈತ – ________ | 10 ಕಾಡು – ________ |

# 10. ತತ್ಸಮ – ತದ್ಭವ

## ಅ. ಹೇಳುತ್ತಾ ಬರೆಯಿರಿ.

1. ಭಕ್ತಿ – ಬಕುತಿ ______________________
2. ಕಾವ್ಯ – ಕಬ್ಬ ______________________
3. ಪಕ್ಷಿ – ಹಕ್ಕಿ ______________________
4. ಸಂಧ್ಯಾ – ಸಂಜೆ ______________________
5. ಪುಸ್ತಕ – ಹೊತ್ತಿಗೆ ______________________
6. ಮೂಕ – ಮೂಗ ______________________
7. ಮುಖ – ಮೊಗ ______________________
8. ಹಂಸ – ಅಂಚೆ ______________________
9. ಭೂಮಿ – ಬುವಿ ______________________
10. ಆರ್ಯ – ಅಜ್ಜ ______________________
11. ವೀಣಾ – ಬೀಣೆ ______________________
12. ಅಕ್ಷರ – ಅಕ್ಕರ ______________________
13. ಪದ್ಮ – ಪದುಮ ______________________
14. ತಟ– ದಡ ______________________
15. ಮಲ್ಲಿಕಾ – ಮಲ್ಲಿಗೆ ______________________
16. ರಾಜ – ರಾಯ ______________________
17. ವಿಜ್ಞಾನ – ಬಿನ್ನಾಣ ______________________
18. ಕಾಕ – ಕಾಗೆ ______________________
19. ತಟ – ದಡ ______________________
20. ಅಟವಿ – ಅಡವಿ ______________________
21. ಯೋಗಿ – ಜೋಗಿ ______________________
22. ಕವಿ – ಕಬ್ಬಿಗ ______________________
23. ಈಶ – ಈಸ ______________________

@KTBS NOT TO BE REPUBLISHED

## ಆ. ನಮ್ಮನ್ನು ಹೊಂದಿಸಿ ಬರೆಯಿರಿ.

ತಟ,
ಅಕ್ಷರ, ಸಂಧ್ಯಾ,
ರಾಜ, ಅಟವಿ, ಕಾರ್ಯ,
ಮಲ್ಲಿಕಾ, ಮುಖ, ನಿತ್ಯ,
ಹಂಸ, ಕಾವ್ಯ, ಮೂಕ, ವೀಣಾ,
ಆರ್ಯ, ವೀರ, ಕಾಕ, ಯೋಗಿ,
ಭಕ್ತಿ, ಪುಸ್ತಕ, ವಿಜ್ಞಾನ,
ಪದ್ಮ, ಪಕ್ಷಿ, ಪಗೆ,

ಜೋಗಿ,
ಬಿನ್ನಾಣ, ಮೂಗ,
ನಿಚ್ಚ, ಅಂಚೆ,
ಬೀರ, ಕಬ್ಬ, ಕಾಗೆ, ಹೊತ್ತಿಗೆ,
ರಾಯ, ಸಂಜೆ, ಅಡವಿ, ಹಕ್ಕಿ,
ಮೊಗ, ಅಂಚೆ, ಅಜ್ಜ, ಬೀಣೆ,
ಅಕ್ಕರ, ಮಲ್ಲಿಗೆ, ದಡ, ಕಜ್ಜ,
ಬಕುತಿ, ಹಗೆ, ಪದುಮ

**ಮಾದರಿ : ನಿತ್ಯ – ನಿಚ್ಚ**

| | |
|---|---|
| 1. | 13. |
| 2. | 14. |
| 3. | 15. |
| 4. | 16. |
| 5. | 17. |
| 6. | 18. |
| 7. | 19. |
| 8. | 20. |
| 9. | 21. |
| 10. | 22 |
| 11. | 23. |
| 12. | 24. |

@KTBS NOT TO BE REPUBLISHED

**ಹೆಚ್ಚಿನ ಮಾಹಿತಿಗಾಗಿ**

ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ವಿಕಾರ ಹೊಂದದೆ ಬಳಸಲ್ಪಡುವ ಪದಗಳನ್ನು **ತತ್ಸಮ**'ಗಳೆನ್ನುವರು. ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪ ಸ್ವಲ್ಪ ಅಥವಾ ಪೂರ್ಣವಾಗಿ ಬದಲಾವಣೆ ಹೊಂದಿ ಬಳಸಲ್ಪಡುವ ಪದಗಳನ್ನು '**ತದ್ಭವ**'ಗಳೆನ್ನುವರು.

**ಇ. ಗೆರೆ ಎಳೆದ ಪದಗಳಿಗೆ ಮಾತ್ರ ತದ್ಭವಗಳನ್ನು ಬರೆಯಿರಿ.**

ಲಕ್ಷ್ಮಿ ಮತ್ತು ಯಮುನಾ ಇಬ್ಬರು ಮೃದು ಸ್ವಭಾವದ ಹುಡುಗಿಯರು. ಇವರಿಬ್ಬರು ತಮ್ಮ ಸ್ನೇಹಕ್ಕೆ ಹಾಗೂ ಬುದ್ಧಿವಂತಿಕೆಗೆ ನಿತ್ಯವೂ ಸಂತೋಷ ಪಡುತ್ತಿದ್ದರು. ಕಲಿಕೆಯ ಜೊತೆ ಜೊತೆಗೆ ನಿತ್ಯವೂ ಕಾವ್ಯಗಳನ್ನು ಓದುವುದು, ಧ್ಯಾನ ಮಾಡುವುದು, ಪೋಷಕರ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುವುದು ಹಾಗೂ ಕವಿಗಳ ಬಗ್ಗೆ ಸಾಹಿತಿಗಳ ಬಗ್ಗೆ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸುವುದು ಇವರಿಗೆ ಅಚ್ಚುಮೆಚ್ಚಿನ ಹವ್ಯಾಸವಾಗಿತ್ತು. ತಂದೆ ತಾಯಿಗಳಲ್ಲದೆ ಪೋಷಕರು, ಸ್ನೇಹಿತರೂ ಇವರಿಗೆ ಚೈತನ್ಯ ತುಂಬುತ್ತಿದ್ದರು. ಸಂದೇಹಗಳ ಬಗ್ಗೆ ಚರ್ಚಿಸುತ್ತಿದ್ದರು.

1. ____________ 2. ____________ 3. ____________

4. ____________ 5. ____________ 6. ____________

7. ____________ 8. ____________ 9. ____________

10. ____________ 11. ____________ 12. ____________

**ಈ. ತತ್ಸಮ ಪದಗಳನ್ನು ಮಾತ್ರ ಆರಿಸಿ ಬರೆಯಿರಿ.**

ಮಲ್ಲಿಕಾ,
ಕಬ್ಬ, ಹೊತ್ತಿಗೆ, ಅಟವಿ, ಕಜ್ಜ, ಕಾಶ, ಸಿರಿ,
ಪ್ರಶ್ನೆ, ಅಡವಿ, ಜರ, ಕೀರ್ತಿ, ಪ್ರಶ್ನಾ, ಕಾವ್ಯ, ಭೂಮಿ, ಪುಸ್ತಕ,
ಬೀದಿ ಕೀರುತಿ, ರಾಜ, ಮಲ್ಲಿಗೆ, ಬುವಿ, ಅಂಚೆ, ಸಂಧ್ಯಾ,
ಜ್ವರ, ರಾಯ, ಕಾಗೆ, ಹಂಸ, ಶ್ರೀ ಸಂಜೆ

____________ ____________ ____________

____________ ____________ ____________

____________ ____________ ____________

____________ ____________ ____________

____________ ____________ ____________

____________ ____________ ____________

NOT TO BE REPUBLISHED
@KTBS

# 11. ಸಮಾಸಗಳು

**ಶಿಕ್ಷಕರೇ, ಈ ಚಟುವಟಿಕೆಯನ್ನು ಅರ್ಥೈಸಿ.**

**ಅ. ನಮ್ಮನ್ನು ಗಮನಿಸಿ ನಂತರ ಬರೆಯಿರಿ.**

1. ಮಳೆಯ + ಕಾಲ = ಮಳೆಗಾಲ
2. ತಲೆಯಲ್ಲಿ + ನೋವು = ತಲೆನೋವು
3. ಮಲ್ಲಿಗೆಯ + ಹೂವು = ಮಲ್ಲಿಗೆಹೂವು
4. ಅರಸನ + ಮನೆ = ಅರಮನೆ
5. ಹಿಮದ + ಆಲಯ = ಹಿಮಾಲಯ

ಆ 1. ಹಿರಿದು + ಮರ = ಹೆಮ್ಮರ

2. ಕೆಂಪಾದ + ತಾವರೆ = ಕೆಂದಾವರೆ
3. ಇನಿದು + ಸ್ವರ = ಇಂಚರ
4. ಹಿರಿದು + ಹಾವು = ಹೆಬ್ಬಾವು
5. ತಣ್ಣನೆ + ಗಾಳಿ = ತಂಗಾಳಿ

ಇ. 1. ಮೂರು + ಕಣ್ಣು = ಮುಕ್ಕಣ್ಣು

2. ಎರಡು + ಕೆಲ = ಇಕ್ಕೆಲ

@KTBS NOT TO BE REPUBLISHED

3. ಮೂರು + ಮಡಿ = ಮುಮ್ಮಡಿ

4. ಒಂದು + ಕಟ್ಟು = ಒಗ್ಗಟ್ಟು

5. ನಾಲ್ಕು + ಮಡಿ = ನಾಲ್ಮಡಿ

ಈ. 1. ಕೈಯ + ಅಡಿ = ಅಂಗೈ

2. ತಲೆಯ + ಮುಂದು = ಮುಂದಲೆ

3. ಕಾಲ + ಅಡಿ = ಅಂಗಾಲು

4. ಮೂಗಿನ + ತುದಿ =ತುದಿಮೂಗು

5. ರಾತ್ರಿಯ + ನಡು = ನಡುರಾತ್ರಿ

ಉ. 1. ಕೆರೆಯೂ + ಕಟ್ಟೆಯೂ + ಬಾವಿಯೂ = ಕೆರೆಕಟ್ಟೆಬಾವಿಗಳು

2. ಗಿಡವೂ + ಮರವೂ + ಬಳ್ಳಿಯೂ = ಗಿಡಮರಬಳ್ಳಿಗಳು

3. ಲವನೂ + ಕುಶನೂ = ಲವಕುಶರು

4. ಹೊಲವೂ + ಮನೆಯೂ = ಹೊಲಮನೆಗಳು

5. ಆನೆಯೂ + ಕುದುರೆಯೂ + ಒಂಟೆಯೂ = ಆನೆಕುದುರೆಒಂಟೆಗಳು

@KTBS NOT TO BE REPUBLISHED

ಊ. 1. ಹಣೆಯಲ್ಲಿ + ಕಣ್ಣುಳ್ಳವನು = ಹಣೆಗಣ್ಣ

2. ಚಂದ್ರನಂತೆ + ಮುಖವುಳ್ಳವಳು = ಚಂದ್ರಮುಖಿ

3. ಚಕ್ರವನ್ನು + ಹಿಡಿದಿರುವವನು = ಚಕ್ರಪಾಣಿ

4. ಗಂಗೆಯನ್ನು + ತಲೆಯಲ್ಲಿ ಧರಿಸಿದವನು = ಗಂಗಾಧರ

5. ನಾಲ್ಕು + ಮೊಗವುಳ್ಳವನು = ನಾಲ್ಮೊಗ

ಋ. 1. ಕೈಯನ್ನು + ತೊಳೆ = ಕೈದೊಳೆ

2. ಮೈಯನ್ನು + ತಡವಿ = ಮೈದಡವಿ

3. ಊಟವನ್ನು + ಮಾಡು = ಊಟಮಾಡು

4. ಕಾಲನ್ನು + ಎಳೆ = ಕಾಲೆಳೆ

5. ಮರವನ್ನು + ಹತ್ತು = ಮರಹತ್ತು

@KTBS NOT TO BE REPUBLISHED

**ಎ. ಪದಗಳನ್ನು ಬಿಡಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.**

**ಮಾದರಿ – ಹಗಲುಗನಸು = ಹಗಲಿನಲ್ಲಿ + ಕನಸು = ತತ್ಪುರುಷ ಸಮಾಸ**

1. ಹಿಂಗಾಲು = ____________________
2 ದಶಕಂಠ = ____________________
3. ಅರಮನೆ = ____________________
4. ಹೊಲ ಮನೆಗಳು = ____________________
5. ವನವಾಸ = ____________________
6. ಮೈದಡವಿ = ____________________
7. ನಡುರಾತ್ರಿ = ____________________
8. ಹೆಬ್ಬಾವು = ____________________
9. ತಲೆನೋವು = ____________________
10. ಚಕ್ರಪಾಣಿ = ____________________

**ಬಿ. ಕೂಡಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.**

**ಮಾದರಿ – ಕಾಲನ್ನು + ತೆಗೆದು = ಕಾಲ್ತೆಗೆದು = ಕ್ರಿಯಾ ಸಮಾಸ**

1. ನಾಲ್ಕು + ಮೊಗವುಳ್ಳವನು = ____________________
2. ಊಟವನ್ನು + ಮಾಡು = ____________________
3. ಮಳೆಯೂ + ಚಳಿಯೂ = ____________________
4. ಇನಿದು + ಸ್ವರ = ____________________
5. ಹಿಮದ + ಆಲಯ = ____________________
6. ರಾತ್ರಿಯ + ನಡು = ____________________
7. ಕಾಲನ್ನು + ತೊಳೆ = ____________________
8. ಧನವೂ + ಧಾನ್ಯವೂ = ____________________

©KTBS NOT TO BE REPUBLISHED

# ಹೆಚ್ಚಿನ ಜ್ಞಾನಕ್ಕಾಗಿ




NOT TO BE REPUBLISHED
@KTBS

# 12. ವಾಕ್ಯಗಳು

**ಅ.ಕೆಳಗಿನ ವಿಷಯಗಳನ್ನು ಕುರಿತು ಐದು – ಆರು ವಾಕ್ಯಗಳನ್ನು ಬರೆಯಿರಿ.**

**1. ಶಾಲಾ ಪಠ್ಯಪುಸ್ತಕ :**

**2. ಪರಿಸರ ಮಾಲಿನ್ಯ :**

@KTBS
NOT TO BE REPUBLISHED

**3. ಆಟಗಳ ಮಹತ್ವ :**

@KTBS NOT TO BE REPUBLISHED

**ಆ. ಮಾದರಿಯಂತೆ ಸಂಬಂಧಪಟ್ಟ ಪದಗಳನ್ನು ಬರೆಯಿರಿ.**

**ಶಾಲೆ, ನಮ್ಮೂರು, ನಮ್ಮ ಮನೆ,**
**ಮಳೆಗಾಲ, ಜಾತ್ರೆ, ಹೊರಾಂಗಣ ಆಟ**

**ಮಾದರಿ :**

**ಶಾಲೆ** = ವಿದ್ಯಾರ್ಥಿ – ಮುಖ್ಯ ಶಿಕ್ಷಕಕರು – ಶಿಕ್ಷಕರು – ತರಗತಿ – ಸಮವಸ್ತ್ರ – ಪಠ್ಯಪುಸ್ತಕ ಆಟದ ಮೈದಾನ – ಕ್ರೀಡಾ ಸಾಮಗ್ರಿ – ಪ್ರಯೋಗಾಲಯ – ಶಾಲಾ ಕೈತೋಟ – ಕಪ್ಪುಹಲಗೆ – ಗ್ರಂಥಾಲಯ – ಬಿಸಿಯೂಟ – ಗೆಳೆಯರು – ಪ್ರತಿಭಾ ಕಾರಂಜಿ – ಕ್ರೀಡೆಗಳು – ವಾರ್ಷಿಕೋತ್ಸವ – ಶಾಲಾ ಪ್ರವಾಸ – ಪರೀಕ್ಷೆ.

**1. ನಮ್ಮೂರು :** ____________________________________________

____________________________________________________________

**2. ನಮ್ಮಮನೆ :** ______________________________

______________________________

______________________________

**3. ಮಳೆಗಾಲ :** ______________________________

______________________________

______________________________

**4. ಜಾತ್ರೆ :** ______________________________

______________________________

______________________________

**5. ಹೊರಾಂಗಣ ಆಟ:** ______________________________

______________________________

______________________________

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ವ್ಯಾಕರಣಾಂಶವನ್ನು ಅರಿತು ಬರೆಯುವೆ. | | | |
| 2. | ಯಾವುದೇ ವಿಷಯದ ಮೇಲೆ ಕಥೆ ಬರೆಯುವೆ. | | | |
| 3. | ಸಂಧಿ ಪದಗಳನ್ನು ಗುರುತಿಸಿ ಹೆಸರಿಸುವೆ. | | | |
| 4. | ಸಮಾಸ ಪದಗಳನ್ನು ಗುರುತಿಸಿ ಹೆಸರಿಸುವೆ. | | | |

**ಶಿಕ್ಷಕರ ಅಭಿಪ್ರಾಯ:**

| | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

# 13. ಕಿರುಪರೀಕ್ಷೆ – 2

## ಅ. ಹೊಂದಿಸಿ ಬರೆಯಿರಿ.

| | | |
|---|---|---|
| (1) ಪ್ರಥಮ ವಿಭಕ್ತಿ | (ಅ) ಮೇರಿಯಿಂದ | ________ |
| (2) ತೃತೀಯ ವಿಭಕ್ತಿ | (ಆ) ರಹೀಮನ ದೆಸೆಯಿಂದ | ________ |
| (3) ಪಂಚಮಿ ವಿಭಕ್ತಿ | (ಇ) ಮರವು | ________ |
| (4) ಷಷ್ಠಿ ವಿಭಕ್ತಿ | (ಈ) ಸಿಹಿಯನ್ನು | ________ |
| (5) ದ್ವಿತೀಯ ವಿಭಕ್ತಿ | (ಉ) ದೂರದ | ________ |

## ಆ. ಸೂಚಿಸಿದ ಪದಗಳನ್ನು ಬಳಸಿ ವಾಕ್ಯ ರಚಿಸಿ.

1. ಮಗು, ತಾಯಿ, ಪ್ರೀತಿ

2. ಹಾಲು, ಸಕ್ಕರೆ, ಆರೋಗ್ಯ

3. ಮಕ್ಕಳು, ಶಿಕ್ಷಕ, ಶಾಲೆ

4. ಫಸಲು, ಕೃಷಿ, ರೈತ

## ಇ. ಬಹುವಚನ ರೂಪ ಬರೆಯಿರಿ.

1. ನಾನು ________ 2. ರೈತ ________ 3. ಶಾಲೆ________

4. ಮಗು ________ 5. ಕೊಂಡಿ ________ 6. ಪ್ರಜೆ________

@KTBS NOT TO BE REPUBLISHED

**ಈ. ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

| | |
|---|---|
| 1. ಜಾಥದಲ್ಲಿ ತುಂಬ ಮಹಿಳೆ ಇದ್ದರು. | |
| 2. ಆಟೋಟಗಳಲ್ಲಿ ಹುಡುಗ ಇದ್ದಾಳೆ. | |
| 3. ಅವರು ಕಥೆಯನ್ನು ಬರೆದಳು. | |
| 4. ರಾಣಿ ಶಾಲೆಗೆ ಹೋಗುತ್ತಾನೆ. | |

**ಉ. ಕೂಡಿಸಿ ಬರೆಯಿರಿ.**

| | |
|---|---|
| 1. ಚಳಿ + ಕಾಲ = | 3. ದೇವರ + ಆಲಯ = |
| 2. ಕಾಲಿನ + ನೋವು = | 4. ಹಿರಿದು + ಮರ = |

**ಊ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

| | |
|---|---|
| 1. ಹೆಬ್ಬಂಡೆ = | 2. ತಲೆದಡವಿ = |
| 3. ಮುಂಗಾರು = | 4. ಮೈದೊಳೆ = |

@KTBS NOT TO BE REPUBLISHED

**ಋ. ಪದಗಳನ್ನು ಬಿಡಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.**

1. ಹೆಬ್ಬೆಟ್ಟು = ____________ ____________
2. ಗಿಡಮರಬಳ್ಳಿಗಳು = ____________ ____________
3. ಮೈದೊಳೆ = ____________ ____________
4. ಹಗಲುವೇಷ = ____________ ____________
5. ಹಿಂಗಾಲು = ____________ ____________

| **ಶಿಕ್ಷಕರ ಅಭಿಪ್ರಾಯ:** | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

# 14. ಸಂಭಾಷಣೆ

## ಅ. ಸಂತೆಯ ದೃಶ್ಯ



ಮೇಲಿನ ಸನ್ನಿವೇಶವನ್ನು ಗಮನಿಸಿ ನಿಮಗನಿಸಿದ್ದನ್ನು ಬರೆಯಿರಿ.

NOT TO BE REPUBLISHED

## ಆ. ಚಿತ್ರವನ್ನು ಗಮನಿಸಿ ವಾಕ್ಯಗಳನ್ನು ಬರೆಯಿರಿ.



@KTBS
NOT TO BE REPUBLISHED

# ರೈತ

**ಇ. ಕೆಳಗಿನ ಗದ್ಯವನ್ನು ಓದಿ, ನಂತರ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ರಚಿಸಿ, ಅವುಗಳಿಗೆ ಉತ್ತರ ಬರೆಯಿರಿ.**

ಒಂದು ಊರಿನಲ್ಲಿ ಸೋಮಣ್ಣನೆಂಬ ರೈತನಿದ್ದನು. ಶಾರದಾ ಸೋಮಣ್ಣನ ಹೆಂಡತಿ. ಅವಳು ಪತಿಗೆ ಬೇಸಾಯದ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದಳು. ಕಿರಣ ಮತ್ತು ಜ್ಯೋತಿ ಸೋಮಣ್ಣನ ಮಕ್ಕಳು. ಕಿರಣನು ಎರಡನೆಯ ವರ್ಗದಲ್ಲಿ ಓದುತ್ತಿದ್ದನು. ಕಿರಣ ಜಾಣ ಬಾಲಕ. ಬಿಡುವಿನ ಸಮಯದಲ್ಲಿ ತಂದೆ ತಾಯಿಗೆ ಕೆಲಸದಲ್ಲಿ ನೆರವಾಗುತ್ತಿದ್ದನು. ಜ್ಯೋತಿ ಇನ್ನೂ ಚಿಕ್ಕವಳು. ಅವಳು ಅಂಗನವಾಡಿಗೆ ಹೋಗುತ್ತಿದ್ದಳು.

ಸೋಮಣ್ಣನು ಹೊಲದಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದನು. ರಂಟೆ – ಕುಂಟೆ ಹೊಡೆದು ಹೊಲವನ್ನು ಹದ ಮಾಡುತ್ತಿದ್ದನು. ಸಮಯಕ್ಕೆ ಸರಿಯಾಗಿ ಬೀಜ ಬಿತ್ತುತ್ತಿದ್ದನು. ದವಸ – ಧಾನ್ಯಗಳನ್ನು ಬೆಳೆಯುತ್ತಿದ್ದನು. ಕಬ್ಬು, ಬಾಳೆ ಇನ್ನಿತರ ಬೆಳೆಗಳನ್ನು ಬೆಳೆಯುತ್ತಿದ್ದನು. ಸೋಮಣ್ಣನು ಬೇಸಾಯದ ಜೊತೆಗೆ ಎಮ್ಮೆ, ಆಕಳು ಮತ್ತು ಆಡುಗಳನ್ನು ಸಾಕುತ್ತಿದ್ದನು, ಅವರು ಸಂತೋಷದಿಂದ ಇದ್ದರು.

ರೈತರು ಜಗತ್ತಿಗೆ ಅನ್ನ ನೀಡುತ್ತಿರುವರು. ಆದ್ದರಿಂದ ರೈತರನ್ನು 'ಅನ್ನದಾತರು' ಎಂದು ಕರೆಯುತ್ತಾರೆ. ಅಲ್ಲದೆ ರೈತರನ್ನು ದೇಶದ 'ಬೆನ್ನೆಲುಬು' ಎಂದೂ ಕರೆಯುತ್ತಾರೆ.

©KTBS NOT TO BE REPUBLISHED

**ಪ್ರಶ್ನೆಗಳು : (ಮಾದರಿ ಪ್ರಶ್ನೆಯನ್ನು ನೀಡಿದೆ)**

1. ಸೋಮಣ್ಣನ ಹೆಂಡತಿಯ ಹೆಸರೇನು?

ಉ: ಸೋಮಣ್ಣನ ಹೆಂಡತಿಯ ಹೆಸರು ಶಾರದ.

2. ______________________

ಉ: ______________________

3. ______________________

ಉ: ______________________

4. ______________________

ಉ: ______________________

5. ______________________

ಉ: ______________________

**ಈ. ಸನ್ನಿವೇಶಕ್ಕೆ ತಕ್ಕಂತೆ ಸಂಭಾಷಣೆಯನ್ನು ಬರೆಯಿರಿ.**

1. ವೈದ್ಯ ಮತ್ತು ರೋಗಿಯ ನಡುವೆ ನಡೆಯುವ ಸಂಭಾಷಣೆ

ವೈದ್ಯ :

ರೋಗಿ :

ವೈದ್ಯ :

ರೋಗಿ :

ವೈದ್ಯ :

ರೋಗಿ :

ವೈದ್ಯ :

ರೋಗಿ :

2. ಪ್ರವಾಸಕ್ಕೆ ಹೋಗಲು ಅನುಮತಿ ಕೋರಿ ತಂದೆ ಮತ್ತು ಮಗಳ ನಡುವೆ ನಡೆಯುವ ಸಂಭಾಷಣೆ.

ತಂದೆ :

ಮಗಳು :

ತಂದೆ :

ಮಗಳು :

ತಂದೆ :

ಮಗಳು :

ತಂದೆ :

ಮಗಳು :

@KTBS NOT TO BE REPUBLISHED

# 15. ಪ್ರಬಂಧ ರಚನೆ

**ಶಿಕ್ಷಕರೇ, ಇದನ್ನು ಮಕ್ಕಳಿಗೆ ಅರ್ಥೈಸಿ.**




**ಕೆಳಗಿನ ವಿಷಯಗಳ ಕುರಿತು ಕಿರು ಪ್ರಬಂಧ ಬರೆಯಿರಿ.**

**1. ಸ್ವಾತಂತ್ರ್ಯ ದಿನಾಚರಣೆ:**

@KTBS NOT TO BE REPUBLISHED

**2. ಕ್ರೀಡಾ ಕೂಟಗಳು:**

**3. ಪ್ರತಿಭಾಕಾರಂಜಿ ಸ್ಪರ್ಧೆ :**

@KTBS
NOT TO BE REPUBLISHED

**11. ಈ ಚಿತ್ರಗಳನ್ನು ಗಮನಿಸಿ, ನಿನಗನಿಸಿದ್ದನ್ನು ಬರೆಯಿರಿ.**



@KTBS NOT TO BE REPUBLISHED

# 16. ಪತ್ರಲೇಖನ

**ಅ. ಪತ್ರಗಳನ್ನು ಬರೆಯುವಾಗ ಬಳಸುವ ಸಂಬೋಧನಾ ಪದಗಳನ್ನು ಹೊಂದಿಸಿ.**

| 'ಅ' ಪಟ್ಟಿ | 'ಬ' ಪಟ್ಟಿ | |
|---|---|---|
| 1. ಪ್ರೀತಿಯ | 1. ತಾಯಿ | ______________ |
| 2. ತೀರ್ಥರೂಪ | 2. ಕಿರಿಯರು | ______________ |
| 3. ಮಾತೃಶ್ರೀ ಸಮಾನರಾದ | 3. ತಂದೆ | ______________ |
| 4. ಚಿರಂಜೀವಿ | 4. ಗೆಳೆಯ ಗೆಳತಿ | ______________ |
| 5. ಮಾತೃಶ್ರೀ | 5. ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅಣ್ಣ | ______________ |
| 6. ತೀರ್ಥರೂಪ ಸಮಾನರಾದ | 6. ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ, ಅಕ್ಕ | ______________ |

@KTBS NOT TO BE REPUBLISHED

**ಆ. ಸರಿಯಾದ ಸಂಬೋಧನಾ ಪದವನ್ನು ಆರಿಸಿ ಬರೆಯಿರಿ.**

1. ತಂಗಿಗೆ ಪತ್ರ ಬರೆಯುವಾಗ ಬಳಸುವ ಪದ ______________

   ಎ) ಚಿರಂಜೀವಿ ಬಿ) ಪ್ರೀತಿಯ

   ಸಿ) ನಲ್ಮೆಯ ಡಿ) ಮಾತೃಶ್ರೀ

2. ಚಿಕ್ಕಪ್ಪನಿಗೆ ಪತ್ರ ಬರೆಯುವಾಗ ಬಳಸುವ ಪದ ______________

   ಎ) ಚಿರಂಜೀವಿ ಬಿ) ಮಾತೃಶ್ರೀ ಸಮಾನರಾದ

   ಸಿ) ತೀರ್ಥರೂಪ ಸಮಾನರಾದ ಡಿ) ತೀರ್ಥರೂಪ

3. ತಂದೆಗೆ ಪತ್ರ ಬರೆಯುವಾಗ ಬಳಸುವ ಪದ ______________

   ಎ) ಮಾತೃಶ್ರೀ ಬಿ) ತೀರ್ಥರೂಪ

   ಸಿ) ಚಿರಂಜೀವಿ ಡಿ) ತೀರ್ಥರೂಪ ಸಮಾನರಾದ

4. ಭಾವನವರಿಗೆ ಪತ್ರ ಬರೆಯುವಾಗ ಬಳಸುವ ಪದ ________________

ಎ) ತೀರ್ಥರೂಪ ಸಮಾನರಾದ

ಬಿ) ಚಿರಂಜೀವಿ

ಸಿ) ಮಾತೃಶ್ರೀ

ಡಿ) ಪ್ರೀತಿಯ

5. ತಾಯಿಯವರಿಗೆ ಪತ್ರ ಬರೆಯುವಾಗ ಬಳಸುವ ಪದ ________________

ಎ) ಚಿರಂಜೀವಿ

ಬಿ) ಮಾತೃಶ್ರೀ ಸಮಾನರಾದ

ಸಿ) ಮಾತೃಶ್ರೀ

ಡಿ) ನಲ್ಮೆಯ

**ಇ. ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯದಿನಾಚರಣೆಯನ್ನು ಕುರಿತು ನಿಮ್ಮ ಸ್ನೇಹಿತನಿಗೆ / ಸ್ನೇಹಿತೆಗೆ ಪತ್ರ ಬರೆಯಿರಿ.**

@KTBS
NOT TO BE REPUBLISHED

# 17. ಛಂದಸ್ಸು

**ಮಹತ್ವ :**

ಕಾವ್ಯಬಂಧಗಳ ಲಕ್ಷಣವನ್ನು ತಿಳಿಸುತ್ತದೆ.

ಛಂದಸ್ಸು ಕೇವಲ ಲಘು–ಗುರುಗಳ ವಿನ್ಯಾಸ ಕ್ರಮವಲ್ಲ.

ಭಾವ ಭಾಷೆಗಳ ನಡುವೆ ಬರುವ ಲಯದ ನಡೆ.

ಛಂದಸ್ಸು ಕಾವ್ಯದ ಒಡಲಲ್ಲಿಯೇ ಇದೆ.

ಛಂದಸ್ಸು ಕಾಲದಿಂದ ಕಾಲಕ್ಕೆ ಬದಲಾಗಿದೆ.

ಲಯ – ಯತಿ – ಪ್ರಾಸ – ಅನುಪ್ರಾಸಗಳಿಂದ ಕೂಡಿದೆ.

**ಛಂದಸ್ಸನ್ನು ಗುರುತಿಸಲು ಮೊದಲು ಲಘು–ಗುರುಗಳನ್ನು ಗುರುತಿಸುವುದನ್ನು ತಿಳಿಯೋಣ.**

ಲಘು ಎಂದರೆ ಎಲ್ಲಾ ಬಗೆಯ ಹ್ರಸ್ವಾಕ್ಷರಗಳು ಮತ್ತು ಹ್ರಸ್ವಸ್ವರದಿಂದ ಕೂಡಿದ ಗುಣಿತಾಕ್ಷರಗಳು, ಇವನ್ನು ಛಂದಸ್ಸಿನ ಪರಿಭಾಷೆಯಲ್ಲಿ '∪' ಎಂದು ಗುರುತಿಸುತ್ತಾರೆ ಲಘುವಿಗೆ ಒಂದು 'ಮಾತ್ರೆ'ಯ ಸ್ಥಾನ, ಗುರುವನ್ನು '–' ಎಂದು ಎರಡು ಮಾತ್ರೆಯ ಗಣನೆಯಲ್ಲಿ ಗುರುತಿಸಲಾಗುತ್ತದೆ, ದೀರ್ಘಸ್ವರವನ್ನು ಮೀರಿದ ಸ್ವರವೇ ಪ್ಲುತ ಇದನ್ನು 'S' ಸಣ್ಣ 'S' ಆಕಾರ ಅಕ್ಷರದ ಕೆಳಗಡೆ ಇಡುವ ಮೂಲಕ ಗುರುತಿಸುತ್ತಾರೆ,

ಉದಾ: "ಕರಡಿಯ ಕುಣಿತ" ಪದ್ಯ

**ಗುರುವು ಯಾವ ಯಾವ ಸಂದರ್ಭಗಳಲ್ಲಿ ಆಗುತ್ತದೆ?**

1. ದೀರ್ಘಸ್ವರ ಮತ್ತು ದೀರ್ಘಸ್ವರದಿಂದ ಕೂಡಿದ ವ್ಯಂಜನಾಕ್ಷರ ಬಂದಾಗ
   ಉದಾ: ಆನೆ, ರಾಜ ಮತ್ತು ಸಂಧ್ಯಕ್ಷರಗಳಿಗೆ – ಐದು ಔಷಧ
2. ಒತ್ತಕ್ಷರದ ಹಿಂದಿನ ಅಕ್ಷರ ಉದಾ: ಚಿತ್ತ,
3. ಶಿಥಿಲ ದ್ವಿತ್ವ ಬಂದೆಡೆ ಅದರ ಹಿಂದಿನ ಅಕ್ಷರ ಗುರು ಆಗುವುದಿಲ್ಲ,

   ∪ ∪ ∪
   ಉದಾ: ಅಮರ್ದು

NOT TO BE REPUBLISHED @KTBS

– ∪
4. ಅನುಸ್ವಾರದಿಂದ ಕೂಡಿದ ಅಕ್ಷರವಿದ್ದಾಗ ಉದಾ: ಕಂದ

– – ∪∪
5. ವಿಸರ್ಗದಿಂದ ಕೂಡಿದ ಅಕ್ಷರವಿದ್ದಾಗ ಉದಾ: ಅಂತಃಪುರ

∪– ∪– ∪– – –
6. ಅರ್ಧಾಕ್ಷರದಿಂದ ಕೂಡಿದ ಅಕ್ಷರವಿದ್ದಾಗ ಉದಾ: ಅವನ್, ಅವಳ್, ಅವರ್, (ಏಲ್,ವರ್)

7. ಷಟ್ಪದಿಯ ಮೂರು ಮತ್ತು ಆರನೇ ಸಾಲಿನ ಕೊನೆಯ ಅಕ್ಷರವು ಲಘುವಾಗಿದ್ದರೂ ಗುರುವಾಗುತ್ತದೆ.

**ಗಮನಿಸಿ :**

**ಪದ್ಯವನ್ನು ರಚಿಸುವ ಶಾಸ್ತ್ರವನ್ನು ಛಂದಸ್ಸು ಎನ್ನುವರು.**

**ಲಘು ಗುರು**




©KTBS NOT TO BE REPUBLISHED

**ಅ. ಕೆಳಗೆ ಕೊಟ್ಟಿರುವ ಪದ್ಯವನ್ನು ಗಮನಿಸಿ.**

∪ ∪ ∪ – ∪ ∪ ∪ ∪ – ∪
ರಜೆಯ । ಗೌಜಿ । ಮುಗಿಯಿ । ತಲ್ಲ

– ∪ – ∪ – ∪ ∪ – ∪
ಗುಲ್ಲು । ಸೊಲ್ಲು । ನಿಲ್ಲಿಸಿ । ಮೆಲ್ಲ

– ∪ – ∪ – ∪ – ∪ – ∪ – ∪ –
ಮಕ್ಕ । ಳೆಲ್ಲ । ಸಿದ್ಧ । ರಾಗಿ । ಮತ್ತೆ । ಓದಿ । ಗೆ

**ಆ. ಮೇಲಿನಂತೆಯೇ ಪದ್ಯಕ್ಕೆ ಪ್ರಸ್ತಾರ ಹಾಕಿ.**

ರಜೆಯ । ಗೌಜಿ । ಮುಗಿಯಿ । ತಲ್ಲ

ಗುಲ್ಲು । ಸೊಲ್ಲು । ನಿಲ್ಲಿಸಿ । ಮೆಲ್ಲ

ಮಕ್ಕ । ಳೆಲ್ಲ । ಸಿದ್ಧ । ರಾಗಿ । ಮತ್ತೆ । ಓದಿ । ಗೆ

**ಇ. ಕೆಳಗಿನ ಪದ್ಯವನ್ನು ಓದಿ ಮತ್ತು ಈ ಪದ್ಯಕ್ಕೆ ಮಾತ್ರೆಗಳನ್ನು (ಪ್ರಸ್ತಾರ) ಹಾಕಿ.**

ಬಾಲನಿವನೆನ್ನದಿರು ದುಗುಡವ

ತಾಳಲಾಗದು ಬೊಪ್ಪ ನಿಮ್ಮಡಿ

ಯಾಲಿಗಳಿ ಗೌತಣವನಿಕ್ಕುವೆನೊರಸಿ ರಿಪುಬಲವ ।

@KTBS NOT TO BE REPUBLISHED

**ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ**

| ಕ್ರ.ಸಂ. | **ಕಲಿಕಾ ಸೂಚಕಗಳು** | ☺ | 😐 | ☹ |
|---|---|---|---|---|
| 1. | ಸನ್ನಿವೇಶಕ್ಕೆ ತಕ್ಕಂತೆ ಸಂಭಾಷಣೆ ಬರೆಯುವೆ. | | | |
| 2. | ವೈಯಕ್ತಿಕ ವ್ಯವಹಾರಿಕ ಪತ್ರಗಳನ್ನು ಬರೆಯುವೆ. | | | |
| 3. | ಪದಗಳ ಸೌಮ್ಯತೆ ವ್ಯತ್ಯಾಸ ಗಮನಿಸಿ ಮಾತನಾಡುವೆ. | | | |
| 4. | ಪದ್ಯಗಳಿಗೆ ಸಾರಾಂಶವನ್ನು ಬರೆಯುವೆ. | | | |
| 5. | ಕಥೆಗಳ ಮೇಲೆ ಪ್ರಶ್ನೆಗಳನ್ನು ರಚಿಸುವೆ. | | | |
| 6. | ಛಂದಸ್ಸಿನ ಮೂಲ ಅಂಶಗಳನ್ನು ಗುರುತಿಸಿ ಬರೆಯುವೆ. | | | |

**ಶಿಕ್ಷಕರ ಅಭಿಪ್ರಾಯ:**

| | | | | | |
|---|---|---|---|---|---|
| **ಅತ್ಯುತ್ತಮ** | | **ಉತ್ತಮ** | | **ಸಾಧಾರಣ** | |

# 18. ಕಿರುಪರೀಕ್ಷೆ – 3

## ಅ. ಪ್ರಾಸ ಪದಗಳನ್ನು ಜೋಡಿಸಿ ಬರೆಯಿರಿ.

ಮರಳು, ಅಚ್ಚು, ಜಗ್ಗದ, ಭೀತಿ, ರೂಪ, ಮೆಚ್ಚು, ಇರುಳು ನೀತಿ, ದೀಪ, ಕುಗ್ಗದ, ಕಣ್ಣು, ಹಣ್ಣು

(ಅ) ______________________

(ಆ) ______________________

(ಇ) ______________________

(ಈ) ______________________

(ಉ) ______________________

@KTBS NOT TO BE REPUBLISHED

## ಆ. ಕೂಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಅ) ದೇವ + ಆಲಯ = ____________ , ____________

ಆ) ಮಳೆ + ಕಾಲ = ____________ , ____________

ಇ) ಏಕ + ಏಕ = ____________ , ____________

ಈ) ಮಾತು + ಇಲ್ಲ = ____________ , ____________

ಉ) ಸುರ + ಇಂದ್ರ = ____________ , ____________

ಊ) ನದಿ + ಅಲ್ಲಿ = ____________ , ____________

## ಇ. ನಾಮಪದದ ಬದಲಿಗೆ ಸರ್ವನಾಮಗಳನ್ನು ಬಳಸಿ ವಾಕ್ಯ ಪೂರ್ಣಗೊಳಿಸಿ.

[ಅವನು, ನೀವು, ಅವರು, ಅವಳು, ಇವರು, ಅವರ ]

ಅ) ಶಂಕರ ಮತ್ತು ಲಾರೆನ್ಸ್ ಗೆಳೆಯರು. ಒಮ್ಮೆ ____________ ಸಂತೆಗೆ ಜೊತೆಯಾಗಿ ಹೊರಟರು.

ಆ) ಅಪ್ಪ, ಅಮ್ಮ ಊರಿಗೆ ಹೊರಟಾಗ ____________ ನಮ್ಮೊಡನೆ ಬರುವಿರಾ? ಎಂದು ಕೇಳಿದರು.

ಇ) ಮಾವ ಅಂಗಡಿಗೆ ಹೊರಟಾಗ ____________ ಕೈಯಲ್ಲಿ ಒಂದು ಕೈ ಚೀಲವಿತ್ತು.

ಈ) ವಿದ್ಯಾಳಿಗೆ ಸಿನಿಮಾ ನೋಡುವ ಮನಸ್ಸಾದುದರಿಂದ ______ ಸಿನಿಮಾ ಮಂದಿರಕ್ಕೆ ಹೋದಳು.

ಉ) ನಿನ್ನೆ ಬಸ್ಸಿನಲ್ಲಿ ______ ಪ್ರಯಾಣ ಮಾಡಿದನು.

**ಈ. ಇವುಗಳನ್ನು ಅಂದವಾಗಿ ಬರೆದು ಕೊನೆಗೆ ಇವು ಏನೆಂದು ತಿಳಿಸಿ.**

ಅ) ಗೊತ್ತು–ಗುರಿ : ______

ಆ) ಹಣ್ಣು–ಹಂಪಲು : ______

ಇ) ಕಾಡು–ಮೇಡು : ______

ಈ) ಮನೆ–ಮಠ : ______

ಇವುಗಳನ್ನು ______ ಎಂದು ಕರೆಯುವರು.

**ಉ. ದೇಶೀಯ ಹಾಗೂ ಅನ್ಯದೇಶೀಯ ಪದಗಳಾಗಿ ವಿಂಗಡಿಸಿ.**

ನೌಕರಿ, ಮೂಲಂಗಿ, ಮೊಸರು, ಕಾಗದ, ತರಕಾರಿ, ಮೂಗು,
ಚಪಾತಿ ಅಂಗಿ ತಂಬೂರಿ, ಬೆಕ್ಕು, ಜವಾನ, ಪಡುವಣ,

| | |
|---|---|
| **ದೇಶೀಯ ಪದಗಳು :** | |
| **ಅನ್ಯದೇಶೀಯ ಪದಗಳು :** | |

©KTBS NOT TO BE REPUBLISHED

**ಊ. ಕೂಡಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.**

ಅ) ಹಿಮದ + ಆಲಯ = ______ , ______

ಆ) ತಣ್ಣನೆಯ + ಗಾಳಿ = ______ , ______

ಇ) ಮೂರು + ಕಣ್ಣು = ______ , ______

| **ಶಿಕ್ಷಕರ ಅಭಿಪ್ರಾಯ:** | | | | | |
|---|---|---|---|---|---|
| **ಅತ್ಯುತ್ತಮ** | | **ಉತ್ತಮ** | | **ಸಾಧಾರಣ** | |

# ಹೆಚ್ಚಿನ ಜ್ಞಾನಕ್ಕಾಗಿ

## ಒಂದೇ ಅರ್ಥವನ್ನು ನೀಡುವ ಶಬ್ದಗಳು

ಒಂದೇ ಅರ್ಥವನ್ನು ಕೊಡುವ ಬೇರೆ ಬೇರೆ ಶಬ್ದಗಳಿಗೆ 'ಪರ್ಯಾಯ ವಾಚಿಶಬ್ದ'ಗಳು ಅಥವಾ 'ಸಮಾನಾರ್ಥಕ ಶಬ್ದ'ಗಳು ಎನ್ನುತ್ತಾರೆ. ಅಂತಹ ಅನೇಕ ಶಬ್ದಗಳನ್ನು ಇಲ್ಲಿ ಕೊಡಲಾಗಿದೆ; ಓದಿ ತಿಳಿಯಿರಿ.

1. **ಮಗ** – ಸುತ, ಪುತ್ರ, ತನಯ, ತನುಜ
2. **ಭೂಮಿ** – ಪೃಥ್ವಿ, ಧರಣಿ, ನೆಲ
3. **ಆಕಾಶ** – ನಭ, ವ್ಯೋಮ, ಗಗನ, ಅಂಬರ
4. **ಬಂಗಾರ** – ಕನಕ, ಕಾಂಚನ, ಹೇಮ, ಸ್ವರ್ಣ
5. **ಗಣೇಶ** – ಗಣಪತಿ, ಗಜಾನನ, ವಿನಾಯಕ, ಏಕದಂತ
6. **ಶಿವ** – ಈಶ್ವರ, ಪರಶಿವ, ನೀಲಕಂಠ, ಗಿರಿಜಾ, ರಮಣ, ಮಲ್ಲಿಕಾರ್ಜುನ
7. **ಪಾರ್ವತಿ** – ಉಮ, ಗಿರಿಜಾ, ಗೌರಿ, ಭವಾನಿ, ಶೈಲಸುತೆ
8. **ತಾಯಿ** – ಮಾತೆ, ಜನನಿ, ಅಮ್ಮ, ಮಾತೃ
9. **ಸರಸ್ವತಿ** – ವಾಣಿ, ವೀಣಾಪಾಣಿ, ವಾಗ್ದೇವಿ, ಶಾರದೆ, ಭಾರತಿ
10. **ಮನೆ** – ಗೃಹ, ನಿಲಯ, ನಿವಾಸ, ಸದನ, ಭವನ
11. **ಕಾಡು** – ಅರಣ್ಯ, ವನ, ಕಾನನ
12. **ಸೂರ್ಯ** – ಭಾಸ್ಕರ , ದಿವಾಕರ, ರವಿ, ಭಾನು, ಆದಿತ್ಯ
13. **ಚಂದ್ರ** – ಶಶಿ, ಚಂದ್ರಮ, ಹಿಮಕರ, ಮಯಂಕ, ಸುಧಾಕರ
14. **ನೀರು** – ಜಲ, ಸಲಿಲ, ಉದಕ, ವಾರಿ
15. **ಗಾಳಿ** – ಅನಿಲ, ಮಾರುತ,ವಾಯು, ಸಮೀರ
16. **ನದಿ** – ತರಣಿ, ಸರಿತಾ, ಪ್ರವಾಹಿನಿ.
17. **ಸಮುದ್ರ** – ಜಲಧಿ, ಸಾಗರ, ರತ್ನಾಕರ
18. **ಕಮಲ** – ಪಂಕಜ, ಜಲಜ, ವಾರಿಜ, ಸರೋಜ
19. **ಮನುಷ್ಯ** – ನರ, ಮನುಜ, ಮಾನವ
20. **ರಾಜ** – ನೃಪ, ಭೂಪತಿ, ಭೂಪಾಲ, ಮಹೀಪಾಲ
21. **ಅಸುರ** – ದಾನವ, ದೈತ್ಯ, ದನುಜ, ನಿಶಾಚರ, ರಾಕ್ಷಸ
22. **ಸ್ನೇಹಿತ** – ಮಿತ್ರ, ಗೆಳೆಯ, ಸಖ
23. **ವೈರಿ** – ಶತ್ರು, ರಿಪು, ಅತಿ
24. **ತಂದೆ** – ಅಪ್ಪ, ಪಿತೃ, ಜನಕ, ಜನ್ಮದಾತ
25. **ಕಣ್ಣು** – ನೇತ್ರ, ಅಕ್ಷಿ, ಲೋಚನ, ಚಕ್ಷು

NOT TO BE REPUBLISHED @KTBS